ಕೊರವಂಜಿ



Koravanji

ನವೆಂಬರ್ ೧೯೪೪

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್.

ಬರಹಗಾರರು :

ಶ್ರೀ|| ನಾ. ಕ.

ಶ್ರೀ|| ಬುಳ್ಳ

ಶ್ರೀ|| ಡಿ. ವಿ. ಕೆ ಶೆಟ್ಟಿ

ಶ್ರೀಮತಿ ಕೇಸರಿ

ಶ್ರೀ|| ಗಂಗಾಧರ

ಶ್ರೀ|| ಎಸ್. ಎ. ಆರ್.

ಶ್ರೀ|| ಪಂಡಿತ್

ಶ್ರೀ|| ಖಾರಾಂತ

ಶ್ರೀ|| ಮೂರ್ತಿ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ಕಿಲಿನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುಒಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.


ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

ವಿಷಯಾನುಕ್ರಮಣಿಕೆ



ಸಂಪುಟ ೩] ಕೊರವಂಜಿ—ನವೆಂಬರ್ ೧೯೪೪ [ಸಂಚಿಕೆ ೮

ಕು ಹ ಕಿ ಡಿ ಗ ಳು

ಕಲ್ಕತ್ತಾದಲ್ಲಿ ಲಾಮನೊಬ್ಬನು ಯುದ್ಧವು ಅಕ್ಟೋಬರ್ 17ಕ್ಕೆ ಮುಗಿಯುತ್ತೆಂದೂ ಈಜಿಪ್ಟಿನ ಜ್ಯೋತಿಷಿಯು, 24ಕ್ಕೆ ಮುಗಿಯುತ್ತೆಂದೂ ಹೇಳಿದ್ದರು.

ನಿಖರವಾದ ಸುದ್ದಿಯನ್ನು ತಿಳಿಯಲು ಹಿಟ್ಲರನು ಜಾತಕವನ್ನು ನೋಡಿಸುತ್ತಿರುವನಂತೆ.

\+ + +

ಭಾರತದಲ್ಲಿ ಜಪಾನೀಯರು ಬಾಂಬುಹಾಕುವ ಸಂಭವವೇ ಇಲ್ಲವಂತೆ

—ಇಲ್ಲಿನ ರಾಜಕೀಯ ಗಜಿಬಿಜಿಯನ್ನು ಕೊನೆಗಾಣಿಸಲು ಜಪಾನೀಯರೂ ಏನನ್ನೂ ಮಾಡರು.

\+ + +

ಸಂಸ್ಕಾರಕ್ಕೆ ತಕ್ಕ ಸಾಹಿತ್ಯವು ಸಾಹಿತಿಗಳಿಂದ ಹೊರಬೀಳುವದಂತೆ.

—ಇದನ್ನು ಬೆವರ್ಲಿ ನಿಕೋಲಸ್‌ಗೆ ಹೇಳಬೇಕು.

\+ + +

ಫೀಲ್ಡ್‌ಮಾರ್ಷಲ್ ರೋಮೆಲ್ಲನ ಮರಣವನ್ನು ಇಡೀ ಜರ್ಮನಿಯಲ್ಲಿ ಆಚರಿಸಿದರಂತೆ.

—ಜರ್ಮನಿಗಿಂತಲೂ ಇಂಗ್ಲೆಂಡಿನಲ್ಲಿ ಇದನ್ನು ಆಚರಿಸಿರಬೇಕಲ್ಲವೇ ?

ಭಾರತಕ್ಕೆ ಸ್ವಾತಂತ್ರ ಸಿಗುವತನಕ, ಜಪಾನು ರಷ್ಯದಮೇಲೆ ಯುದ್ಧ ಮಾಡುವುದಿಲ್ಲವೆಂಬುದು ಸುಳ್ಳುಸುದ್ದಿ.

✤ ✤ ✤

ಸಮರ ನಿಪುಣನು ರಷ್ಯಾದ ಮುಖಂಡನಾದರೆ ಮಾತಿನ ಮಲ್ಲನು ಇಂಗ್ಲೆಂಡಿನ ಮುಖಂಡನು.

✤ ✤ ✤

ರವಿಕಾಣದುದ ಕವಿ ಕಂಡ

—ಕವಿ ಕಾಣದುದ ಎಕ್ಸರೇಲಿ ಕಂಡ.

✤ ✤ ✤

"ಏನಮ್ಮಾ" ಎಂದು ಬೆನ್ನಮೇಲೆ ಹೊಡೆಯುವವನು, ನಿಮ್ಮಿಂದ ಏನನ್ನಾದರೂ ಕಕ್ಕಿಸುವುದಕ್ಕೇ ಹಾಗೆ ಮಾಡುವುದು.

✤ ✤ ✤

ಜಟ್ಕಾಗಳಿಗೂ ಎರಡು ತರಹ ವೇಗದ ಓಟವಿದೆಯಂತೆ

—ಹೇ - ಹೇ - ಹೈ ಒಂದು — ಕೂತವರು ಕೆಟ್ಟರು ಇನ್ನೊಂದು.

✤ ✤ ✤

ಸಾವಿರಾರು ಜನ ಸಾವು ಬೇಡ ಎನ್ನುವರು, ಜಡಿಮಳೆ ಬಂದ ಒಂದು ಹಗಲು ಕಳೆಯಲು ಅಸಮರ್ಥರು.

✤ ✤ ✤

ಮುಂಬರುವ ಶಾಂತಿ ಸಮ್ಮೇಳನದಲ್ಲಿ ತಾಟಸ್ಥ್ಯರಾಷ್ಟ್ರಗಳು—ತಾಟಸ್ಥರಾಗಿಯೇ ಇರುತ್ತದೆಯೇ? ಎಂದು ಪ್ರಶ್ನೆ.

—ಹೌದು. ಶಾಂತಿ ಸಮರದಲ್ಲೂ ಭಾಗವಹಿಸುವುದಿಲ್ಲವಂತೆ.

✤ ✤ ✤

ಹಿಟ್ಲರನಿಗೆ ಮುಸ್ಸಲೊನಿಯು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದಾನಂತೆ.

—ಅಂದರೆ ಹಿಟ್ಲರನನ್ನು ಬೀಳ್ಕೊಟ್ಟಂತೆಯೇ—

✤ ✤ ✤

ಹೆಬ್ಬಿಗುಬ್ಬಾಲೆಯಲ್ಲಿ, ಸೋತ ರಾಜಕೀಯ ಪಕ್ಷದ ಮುಖಂಡನಿಗೂ ಕಹಲು ಜೋಡು ಕೊಟ್ಟರಂತೆ—

ಉರಿಗಾಳು

ನೀರಿನಲ್ಲಿ ನೆನೆಯದ ನೋಟುಗಳು ಬರುತ್ತವಂತೆ ಮುಂದಿನ ತಿಂಗಳು........ ಸರಿ! ಅವು ಬಂದಮೇಲೆ, ಅವುಗಳನ್ನೇ ಜೋಡಿಸಿ ಒಂದು ಕೊಡೆ ಹೊಲೆದು ಕೊಂಡು ಬಿಡಬೇಕು....ಅದೇ ಲಾಭ.

✤ ✤

ಬೆಂಗಳೂರು ನಗರದಲ್ಲಿ ಕೆಲವು ಕಡೆ "ಒನ್‌ವೇ" ಟ್ರಾಫಿಕ್ ಬಂದಮೇಲೆ ದಾರಿಗರಿಗೆ ಒಂದು ದೊಡ್ಡ ಅನುಕೂಲ ಸಿಕ್ಕಿದೆ... ಲಾರಿಗಳು ಎಲ್ಲಿ ಡಿಕ್ಕಿ ಹೊಡೆಯುತ್ತವೆ, ಅಂತ ಗೊತ್ತಾದ ಹಾಗಾಯಿತು.

✤ ✤ ✤

"ಯಂತ್ರಯುಗ ಬೆಳೆಯುತ್ತಾ ಬೆಳೆಯುತ್ತಾ ಹೆಂಗಸರ ಕೈಗಳು ಬರೀ ಭೂಷಣಗಳಾಗುತ್ತಿವೆ" (ಗ್ರಂಥವೊಂದರಲ್ಲಿ)....ಎಲ್ಲವೂ ಇಲ್ಲ... ಹಲವು....ಅಷ್ಟೆ.

✤

ಲಂಡನ್ನಿನಲ್ಲಿ ಗಾಂಧಿಜಿಯವರ ಶಿಲಾಪ್ರತಿಮೆಯೊಂದನ್ನು ಸ್ಥಾಪಿಸುವ ಯೋಚನೆ ಇದೆಯಂತೆ....ಚರ್ಚಿಲ್, ಅಮೆರಿ, ಬೆವರಲಿ ನಿಕಾಲ್ಸ್ ಮುಂತಾದವರು ಗಾಂಧಿಯವರಮೇಲೆ ಎಸೆದಿರುವ ಕಲ್ಲುಗಳಿಂದಲೇ ಆ ಪ್ರತಿಮೆಯನ್ನು ಮಾಡುವರೆ ಎಂಬ ವದಂತಿಯೂ ಇದೆ.

✤ ✤ ✤

ನಾವು ನಮ್ಮ ಐರಿಷ್‌ಭಾಷೆಯನ್ನು ಬಿಟ್ಟು ನಮ್ಮನ್ನು ತುಳಿಯುತ್ತಿರುವ ಇಂಗ್ಲೀಷರ ಭಾಷೆಯನ್ನು ಆಡುತ್ತಿರುವುದು ಅಪಮಾನಕರ" (ಡಿ ವಲೀರ)........ ನಮ್ಮ ದೇಶದಲ್ಲಿ ನಾವು ಇದಕ್ಕಾಗಿಯೇ ಇಂಗ್ಲೀಷ್ ಭಾಷೆಯನ್ನು ಅಂದಗೆಡಿಸಿ, ಅದರ ವ್ಯಾಕರಣವನ್ನು ಮುರಿದು, ತುಳಿಯುತ್ತಿರುವುದು.

✤ ✤ ✤

ರೂಸ್‌ವೆಲ್ಟರ ಖಾಸಾ ರಾಯಭಾರಿ ವಿಲಿಯಂ ಫಿಲಿಪ್ಸ್‌ರವರು ಸದ್ಯಕ್ಕೆ ಅಮೇರಿಕಾದಲ್ಲೇ ಇರುವರಂತೆ........ಹೌದು. ಅವರ ಗಾಂಧೀ ಜ್ವರ ಕೊಂಚ ವಾಸಿಯಾಗಲಿ, ಪಾಪ.

✤ ✤ ✤

"ಬಂಗಾಳದ ಬರಗಾಲಕ್ಕೆ ಹಿಂದೂಸ್ತಾನದಲ್ಲಿ ಆಗುತ್ತಿರುವ ಅಪರಿಮಿತ ಸಂತಾನಾಭಿವೃದ್ಧಿಯೇ ಮುಖ್ಯಕಾರಣ ?" (ಚರ್ಚಿಲ್ ಸಾಹೇಬರು)....ಯುದ್ಧಾನಂತರದಲ್ಲಿ ಭಾರತೀಯ ಯುವಕರನ್ನು ಪಾಶ್ಚಾತ್ಯ ವಿಶ್ವ ವಿದ್ಯಾನಿಲಯಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಕಳುಹಿಸಬೇಕೆಂಬ ಯೋಜನೆಗೂ ಇದಕ್ಕೂ ಸಂಬಂಧ ಹುಡುಕಬಾರದಂತೆ.

✤ ✤ ✤

"ಮನುಶ್ರುತಿಯಿಲ್ಲವೊ.... ಮೋಸ !" (ಡಾ|| ಅಂಬೇಡ್ಕರ್)....ಇತಿ ಅಂಬೇಡ್ಕರ್ ಸ್ಮೃತಿಃ....

✤ ✤ ✤

ರಾತ್ರಿ ಮಲಗುವಾಗ ಸ್ವಿಚ್ ಹಾಕಿ ದೀಪ ಆರಿಸಿದೆನೋ ಇಲ್ಲವೋ ಎಂಬ ಅನುಮಾನ ಬಂದಾಗ, ನಮ್ಮ ಸ್ನೇಹಿತರೊಬ್ಬರು ಬೆಂಕಿಕಡ್ಡಿ ಗೀಚಿ, ಸ್ವಿಚ್ ಕಡೆ ನೋಡಿ, ಸಮಾಧಾನಪಡೆದು ಮಲಗಿದರು.

✤ ✤ ✤

—o—

ಮದರಾಸಿಗೆ ಇಲ್ಲಿಂದ ಸಾವಿರ ಹಸುಗಳು ತಿಂಗಳಿಗೊಮ್ಮೆ ಬೇಕಂತೆ.

—ಅದಕ್ಕಿಂತಲೂ ಸಾವಿರ ಮನುಷ್ಯರನ್ನೇ ಕೇಳಬಾರದೆ—ಎರಡೂ ದೇಶಗಳಿಗೆ ಅನುಕೂಲ.

✤ ✤ ✤

ಇನ್ನು ಮೇಲೆ ಇಡಲಿ, ದೋಸೆ ಹೋಟಲುಗಳಲ್ಲಿ ಸಿಗುವುದಿಲ್ಲವಂತೆ.

—ಮತ್ತೆ ವಿದ್ಯಾರ್ಥಿಗಳು ಹೇಗೆ ವ್ಯಾಸಂಗ ಮಾಡಿಯಾರು ?

✤ ✤ ✤

ಚರ್ಚಿಲ್ಲರಿಗೂ ಸ್ಟಾಲಿನ್ನರಿಗೂ ಎಲ್ಲಾ ವಿಷಯಗಳಲ್ಲಿಯೂ ಒಪ್ಪಂದವಾಗಿದೆಯಂತೆ

—ಆದರೆ, ಕಾರ್ಮಿಕ ಸರಕಾರ ಎಲ್ಲೆಲ್ಲಿರಬೇಕು ಎಂಬುವುದು ಚರ್ಚೆಯ ವಿಷಯವಾಗಿತ್ತಿಲ್ಲವಂತೆ.

✤ ✤ ✤

ಸುಖಸಾಗರ

ಮನುಷ್ಯ ಪ್ರಾಣಿಗಳು ಬಾಳಿ ಬದುಕುತ್ತಿರುವ ಈ ಇಟ್ಟಿಗೆ ಗಾರೆ ಗೂಡುಗಳು ಹೊರನೋಟಕ್ಕೆ ಚಂದ, ಅಷ್ಟೆ....!

ಎಂಬ ಮಾತಿನ ನಿಜಾಂಶ ನನಗೆ ಮೊನ್ನೆ ತಿಳಿಯಿತು.

ಕೆಲವರಿದ್ದಾರೆ. ಯಾರಾದರೂ ಮನೆಗೆ ಬಂದರೆ ಅವರನ್ನ ಮಾನವಾಗಿ ಹಿಂದಕ್ಕೆ ಕಳುಹಿಸುವುದಿಲ್ಲ. "ಬರ್ತೇವೆ" ಅಂತ ಅವರು ಬೈಸಿಕಲ್ ಹತ್ತುತ್ತಲೂ, "ಬನ್ನಿ! ಒಳಗೆ ಬನ್ನಿ, ಸಾರ್! ತಾವು ಮನೆ ಒಳಗಡೆ ನೋಡಿಲ್ಲವಲ್ಲಾ!" ಅಂತಾರೆ. "ಆಗಲಿ" ಅಂತ ನೀವು ಇಳಿದು ಒಳನುಗ್ಗಲೇ ಬೇಕು. "ನಿಮ್ಮ ಸ್ವಂತವೇನು?" ಅಂತ ಕೇಳಲೇಬೇಕು. ಆಗ ಅವರು, "ಬಾಡಿಗೆ! ಆದರೂ, ಭೋಗ್ಯಕ್ಕೆ ತೆಗೆದುಕೊಳ್ಳೋಣವೋ ಅಂತ ಯೋಚನೆಮಾಡುತ್ತಿದ್ದೇನೆ" ಅಂತಾರೆ. "ಬನ್ನಿ, ಬನ್ನಿ, ಪರವಾಗಿಲ್ಲ, ಹಾಗೆಯೇ ಬರಬಹುದು" ಅಂತ ಒಳಕ್ಕೆಳೆದು ಬಿಡುತ್ತಾರೆ........

ಬೆಳಗ್ಗೆ 9-30ರ ಸಮಯ. "ಇದೇ, ಡ್ರಾಯಿಂಗ್ ರೂಂ!" ಕತ್ತಲೆ ಕಣ್ಣಿಗೆ ಅಭ್ಯಾಸವಾದಮೇಲೆ ನಿಮಗೆ ಕಾಣಿಸುವುದು, ನೆಲದಮೇಲೆ ನಾಲ್ಕು ವಾಸನೆ ಹಾಸಿಗೆ; ವಾಂತಿಮಾಡುತ್ತಿರುವ ಮೂರುವರ್ಷದ ಒಂದು ಕೂಸು; ಮೂಲೆಯಲ್ಲಿ ಒಂದು ಬಿದಿರಿನ ತೊಟ್ಟಿಲು; 'ಎಲಾ! ಜಿಪುಣಾಗ್ರೇಸರಾ! ಸಂಬಳ ನೋಡಿದರೆ 220!'; ಗಬ್‌ವಾಸನೆ; ಇನ್ನೂ ಗುಡಿಸಿಲ್ಲ; ಕಪ್ಪು ಹಿಡಿದ ರಾಮದೇವರ ಪಠ: 'ಯಾರದು ಮೂಲೆಯಲ್ಲಿ? ಮುಖಕ್ಷೌರಮಾಡಿಕೊಳ್ಳುತ್ತಿರುವುದು, ಕತ್ತಲೇಲಿ?'........ಅವರ ಜವಾಬು "ನನ್ನ ಭಾವಮೈದ! ಲೋವರ್ ಸೆಕಂಡರಿ ಕ್ಲಾಸು".... 'ಅಯ್ಯೋ! ಧಾಂಡಿಗ! ರೇಷನ್ ಕಾಲದಲ್ಲೂ ಹೀಗೆ.... ಅಡ್ಡಡ್ಡಲಾಗಿ!' ಒಂದು ತೂತು ಬಿದ್ದ ಸೋಫಾ! ಕಬ್ಬಿಣದ ಸುರುಳಿ ಸಾಲು!

"ಬನ್ನಿ! ಬನ್ನಿ! ಇದೇ ಬೆಡ್ರೂಮು!"....ದೇವರೇ ಕಾಪಾಡಬೇಕು... "ಒಳಗೆ ಬನ್ನಿ!"....ಓ! ಇಲ್ಲೂ ಒಂದು ತೊಟ್ಟಿಲು; ಹೊಸ ಬಿದಿರು; ಮಗು ಕಿರಿಚುತಾ ಇದೆ, ಒಂದೇಸಮನೆ; "ಹೆಣ್ಣೋ, ಗಂಡೋ?"; ಜವಾಬು, "ಹೆಣ್ಣು", "ನನ್ನ ಮಗಳದು....ಪಂಕಜನ್‌ದು....ಅಳಿಯ ಇಲ್ಲೇ ಬಂದಿದ್ದಾನೆ; ವರ್ಗವಾಯಿತು ಮೊನ್ನೆ; ಮೊನ್ನೆ ಅಂದರೆ 3 ವರ್ಷವಾಯಿತು....ಮನೆ ಹುಡುಕುತ್ತಾ ಇದ್ದಾರೆ; ಇಷ್ಟು ನೀಟಾದ್ದು ಬೇರೆ ಯಾವುದೂ ಸಿಗಲಿಲ್ಲ!'... ಬೂಟ್ಸುಗಳ ರಾಶಿ; ಒಡೆದ ನಿಲುಗನ್ನಡಿ; ಬೆಂಡಿನ ಹಾರಗಳು ದಂಪತಿಗಳ ಪಠಗಳಿಗೆ.... 'ಯಾರು?' "ನನ್ನ ತಂದೆ, ನನ್ನ ತಾಯಿ, ಬೊಂಬಾಯಿಯಲ್ಲಿ ದೊಡ್ಡದು ಮಾಡಿಸಿದೆ, 32ರಲ್ಲಿ"....ಹರಿದು ನೇತಾಡುತ್ತಿರುವ ಸೊಳ್ಳೆಪರದೆ; 32 ರಿಂದ 42 ವರೆಗಿನ ಕ್ಯಾಲೆಂಡರುಗಳು; 'ಮೂಗಾಂಬಿಕೆ' ನಶ್ಯದ್ದು!........ ಕೊಳೆತ

ಹೂವಿನವಾಸನೆ ; ದುಂಡುಮೇಜು ವಾಲಿದೆ; ಅದರಮೇಲೆ ಕೃತಕ ಹಣ್ಣಿನಸಾಲು! ....' ಯಾರದು ? '....“ ಅಳಿಯನದು ! ''....ರಾವಾ!

ಬನ್ನಿ ! ಬನ್ನಿ ! ಇದೇ ಉಗ್ರಾಣ....“ ಓ! ಕತ್ತಲೆ ”....ಒಳಗಿಂದ ನಾಲ್ಕು ಇಲಿಗಳು ಹೊರಕ್ಕೆ ಓಡಿಬಂದವು.... “ ಆಮೇಲೆ ಬರೋಣ....ಆ ಕಿಟಕಿಯನ್ನ ಹೊರಗಿನಿಂದ ಗುದ್ದಿ ತೆಗಿಯಬೇಕು, ಬೆಳಕುಬೇಕಾದರೆ....ಲೋ! ಇನ್ನೂ ಹುಡುಗ ರೆದ್ದಿಲ್ಲ....ಮಹಡಿಮೇಲೆ ಮಲಗಿದಾರೆ....ಮೂರು ಜನ....ಆಳೂ ಬಂದಿಲ್ಲ....''.... ' ಚಿಂತೆ ಇಲ್ಲ ! ಉಗ್ರಾಣದಲ್ಲೇನಿರುತ್ತೆ, ಈಗಿನಕಾಲದಲ್ಲಿ ! ನಾನೇನು ಇನ್‌ಸ್ಪೆಕ್ಟರ್ ಕೆಟ್ಟುಹೋದೆನೇ ? ಅದರೊಳಗಿಂದ ಹೊರಕ್ಕೆ ಬಂದ ಇಲಿಗಳನ್ನ ನೋಡಿ ದರೇನೇ ಗೊತ್ತಾಗುತ್ತೆ ಒಳಗಿನ ಭಂಡಬಾಳ....”

“ ಹ ...ಹ್ಹ....ಹ್ಹ....ನೀವು ತಮಾಷೆ ಮಾಡುತ್ತಿದೀರಿ !.... ಬನ್ನಿ ! ಬನ್ನಿ ! ಇದು ಹೆಂಗಸರಿಗೆ ಅಂತ ... ಸುಮ್ಮನೆ....ಒಂದು ರೂಮು ! ಬನ್ನಿ ! ನನ್ನಮಗಳು ಹೇಳಿದೆನಲ್ಲಾ ಪಂಕಜಾ ಇದಾಳೆ, ಅಷ್ಟೆ. ” ಕೃತಕ ದಂತದ ಪತ್ನಿ....ಮೂರನೆಯ ಸಂಬಂಧವಿರಬಹುದು....ಪೌಡರ್ ಚೆಲ್ಲಿದಾರೆ....ಉಜ್ಜಿಕೊಂಡಿಲ್ಲ....“ ಎಸ್. ಎಸ್. ಎಲ್. ಸಿ.....ಇವಳು ! ” ಹೊರಕ್ಕೆ ಹಾರಿದೆ.

ಹೀಗೆ ಬನ್ನಿ ! ಸರಸು ! ಒಳಗಿದಿಯಾ ?....ಆ....ಸರಿ ! ಸರಿ! ಇದೊಂದು ಸಣ್ಣರೂಮು ...ಸರಸು, ನನ್ನ ತಂಗಿ....ಅವಳದೇ ಆ ವಾಂತಿಮಾಡಿದ ಕೂಸು.... ಇನ್ನಿಬ್ಬರಿದಾರೆ....ಗಂಡ ಬೊಂಬಾಯಲ್ಲಿ ಜೂಜಿಗೆ ಬಿದ್ದಿದ್ದ....ಮೊನ್ನೆ ಆಸ್ಫೋಟನ ವಾಯಿತಲ್ಲ....ಈಚೆಗೆ ಸುದ್ದಿ ಇಲ್ಲ....''

“ ಚಪ್ಪಲೀನ ಅಲ್ಲೀ ಕಳಚಿ....ಬನ್ನಿ....ಬನ್ನಿ ! ಅಂಥಾದ್ದೆಲ್ಲ ನಾವಿಟ್ಟುಕೊಂಡೇ ಇಲ್ಲ ! ಇಟ್ಟುಕೊಳ್ಳಲು ಈಗಿನ ಕಾಲದಲ್ಲಿ ಸಾಧ್ಯವೂ ಇಲ್ಲ !....” “ ಅಡಿಗೆಮನೆ ” ಬಾಗಿಲು ತಳ್ಳಿದರು.... ಹೊಗೆ, ಸೀದುಹೋದ ಉಪ್ಪಿಟ್ಟಿನ ವಾಸನೆ, ಕತ್ತಲು....“ ಅದೇ, ಮೂಲೆಯಲ್ಲಿ, ದೇವರು ! ಇದ್ದೇ ಇರುತ್ತಾನಲ್ಲಾ ನಮ್ಮಗಳ ಮನೆಗಳಲ್ಲಿ ! ” ಏನೂ ಕಾಣಿಸಲಿಲ್ಲ...ಮೊಸರು ಕಡೆಯುವ ಸದ್ದು ! “ ನನ್ನತಾಯಿ ” ಮಕ್ಕಳ ಕಿರಲಾಟ. “ ಬೆಣ್ಣೆ ! ಬೆಣ್ಣೆ ! ''....“ ನನ್ನದೊಂದು, ಪಂಕಜನದು ಎರಡು ''........ ಒಲೆಮುಂದೆ, ಹಸಿ ಸೌದೆಗೆ ಗಾಳಿ ಊದುತ್ತಾ ಯಾರೋ ಬಿಕ್ಕಿ ಬಿಕ್ಕಿ ಅಳುತ್ತಿದ್ದರು....“ ನನ್ನಲೇಡಿ ” ಯಾಕೆ ? ಖಾಯಿಲೆ ಏನು? “ ಇಲ್ಲ, ಇಲ್ಲ ! ದಿನ ಬೆಳಗಾದರೆ ಇದ್ದೇ ಇರುತ್ತಲ್ಲಾ, ಅತ್ತೆ ಸೊಸೆ ವ್ಯಾಜ್ಯಗಳು ....ಸರಸು ಬಂದಮೇಲೆ ಇದ್ದದ್ದೂ ಜಾಸ್ತಿ....ಈ ಹಾಳುಗೋಳು !''

“ ಬನ್ನಿ ! ಬನ್ನಿ ! ಬಾವಿ ಹತ್ತಿರಕ್ಕೆ ಹೋಗೋಣ ! ”

ನಾನು ಹೋಗಲಿಲ್ಲ!........ಕಾಲಿಗೆ ಚಪ್ಪಲಿ ತಗುಲಿಸಿಕೊಂಡು, ಬೈಸಿಕಲ್ ಹತ್ತಿ....ತಿರುಗಿ ನೋಡಿದೆ ...

ಮನೆ ಮುಂದಿನ ಕಂಬದಲ್ಲಿ “ ಸುಖ-ಸಾಗರ ” ಎಂಬ ಹೆಸರಿತ್ತು....

ಈ ಇಟ್ಟಿಗೆ ಗಾರೆ ಗೂಡುಗಳು ಹೊರನೋಟಕ್ಕೆ ಚಂದ, ಅಷ್ಟೆ.

—ನಾ. ಕ.

ಸೇಡು . . . .



ಇದೇನ್ಬಂತು ! ?

ಅಲ್ವೇ .... ಇದೇನ್ಬಂತು .... ! ?

ಯಾಕೆ .... ?

ಏನು ಯಾಕೆ ? ಅಲ್ಲ .... ಇದ್ದಕ್ಕಿದ್ದಹಾಗೆ ಈ ಪ್ರಯಾಣ ಏನೂ ....ಅಂತ ?

ಸರಿಹೋಯ್ತು, ಬಿಡಿ .... ಎಂಟು ದಿವಸದಿಂದ ಹೇಳ್ತಾ ಇದೇನೆ .... 'ಇದ್ದಕ್ಕಿದ್ದ ಹಾಗೆ' ಎನ್ಬಂತು ?

ಅದಲ್ಲಕಣೆ ನಾನುಹೇಳೋದು .... ಈ ಕಾಲದಲ್ಲಿ ಪ್ರಯಾಣ ಅಂದ್ರೆ ಎಷ್ಟುಕಷ್ಟ ಅಂತೀಯೆ ! ಎಷ್ಟುತೊಂದ್ರೇ ಏನುಕಥೇ ....! ಅದರಲ್ಲೂ ಬಸ್ಸು ಅಂದ್ರೆ ನಂಬೋದಕ್ಕೆ ಇಲ್ಲ. ಗ್ಯಾಸುಬಸ್ಸು. ದಾರೀಲೇ ನಿಂತು ಬಿಡುತ್ವೆ. ವಿಪರೀತ ಓವರ್‌ಲೋಡು ....

ಸರಿ ಸರಿ. ಮಕ್ಕಳನ್ನ ಹೆದರಿಸೋ ಹಾಗೆ ಹೆದರಿಸ್ತೀರಲ್ಲ ! ಏನು ಯಾರೂ ಬಸ್ನಲ್ಲಿ ಹೋಗೋದೇ ಇಲ್ವೆ ? ಎಲ್ಲಾ ಬಸ್ಸೂ ಖಾಲಿಯಾಗೇ ಓಡಾಡ್ತಾ ಇವೆಯೆ ! ಅಥವಾ ಬಸ್ನಲ್ಲಿ ಹೋಗೋವರೆಲ್ಲ ಮನುಷ್ಯರೇ ಅಲ್ವೋ ಏನೋ...............

ಹಾಗಲ್ಲಕಣೇ .... ನಾನು ಹೇಳೋದನ್ನ ನೀನು ಸರಿಯಾಗಿ ಅರ್ಥವೇ ಮಾಡಿಕೊಳ್ಳೋದಿಲ್ಲ. ಯಾವಾಗ್ಲೂ ಹೀಗೆ ನೀನು. ಬಸ್ಸುಪ್ರಯಾಣ .... ಬಹಳ ಅನಾನುಕೂಲ .... ಬಹಳ ತೊಂದ್ರೆ .... ಅದರಲ್ಲೂ ಹೆಂಗಸರು .... ಒಂಟಿಯಾಗಿ .... ದೂರ ಪ್ರಯಾಣ ಅಂದ್ರೆ .... ಸ್ವಲ್ಪ ಯೋಚನೆ .... ನಾವಾದ್ರೆ ಗಂಡಸರು ....

ಸಾಕು ಸುಮ್ನಿರಿ ಅಂದ್ರೆ .... ಗೊತ್ತಿದೆ .... ಯಾಕೆ ಹೇಳ್ಕೊಳ್ತೀರಿ ಪದೇಪದೇ .... ಗಂಡಸರೂ .... ಗಂಡಸರೂ .... ನಾವೂ .... ಅಂತ ! ನಿಮಗೆ ಇಲ್ಲದೇ ಇರೋ ಅನಾನುಕೂಲ, ತೊಂದ್ರೆ, ಎಲ್ಲ ನಮಗೇ ಆಗುತ್ತೆ ಅಲ್ಲವೆ .... ಬಸ್ಸುಗಳಲ್ಲಿ ?........ಏನು ಚಮತ್ಕಾರ .... ಈ ಗಂಡ್ಸರದು ! ?

ನೋಡು, ನೀನು ಏನುಬೇಕಾದರೂ ಅನ್ನು .... ಆದರೆ ಚಮತ್ಕಾರ ಗಿಮತ್ಕಾರ ಅಂತ ಮಾತ್ರ ಹೇಳಬೇಡ. ಅದೆಲ್ಲ ನಿಮ್ಮಿಂದ ಕಲ್ತದ್ದು ಕಣೆ ....

ನಾವು. ... ಅದು ಹೋಗಲಿ ... ಈಗ ನನಗೂ ನಿನಗೂ ಯಾಕೆ ಕಲಹ ? ನಿನ್ನಿಷ್ಟ ಬಂದಹಾಗೆ ಹೋಗು. ನಾನೇನು ಬೇಡ ಅಂದ್ನೆ ?

ಇನ್ನೇನಂದ್ರಿ ? ನೀವು ಹೇಳೋದು ನಿಮಗೇ ತಿಳಿಯೋದಿಲ್ಲ ಅಂತ ಕಾಣುತ್ತೆ ! ಅಲ್ಲಾಂದ್ರೆ ... ನಾನು ಒಂಟಿಯಾಗಿ ಹೋಗ್ತೀನೆ ಅಂತ ಹೇಳಿದ್ನೆ ? ನೆರೆ ಮನೆ ನಂಜಮ್ಮನವರು ಎಷ್ಟು ಪ್ರಯಾಣಮಾಡಿದಾರೆ .... ಎಷ್ಟು ಅನುಭವ! ಅವರ ಜೊತೇಲಿ ಹೋಗ್ಬಿಟ್ಟು ಬರ್ತೀನೆ ಅಂದ್ರೆ ... ಇದ್ಯಾಕೆ ಎಳೇ ಮಕ್ಕಳ ಹಾಗೆ ಆಡ್ತೀರಲ್ಲ !

ಹೌದೌದು ...... ನಿನಗೆ ಎಳೇ ಮಗೂನ ಎತ್ತಿಕೊಂಡು ಏಳು ವರ್ಷ ಆಯಿತು... ಅದಕ್ಕೇ ನಿನ್ನ ಕಣ್ಣಿಗೆ ಎಲ್ಲರೂ ಎಳೇ ಮಕ್ಕಳಹಾಗೆ ಕಾಣ್ತಾರೆ ! ನೀನೇನು ಮಾಡೀಯೆ ಹೇಳು ... ಎತ್ತಿಕೊಳ್ಳೋಕೆ ಎಳೇ ಮಗು ಇಲ್ದೇ ಇರೋದ ರಿಂದ್ಲೇ ನೀನು ಹೀಗೆಲ್ಲ ಆಡ್ತಿರೋದು !

ನೋಡಿ,... ನೀವು ಹೀಗೆಲ್ಲಾ ನಾಚಿಕ್ಕೆಟ್ಟವರಂತೆ ಮಾತಾಡಬೇಡಿ. ಏನೋ ಒಂದು ಸ್ವಲ್ಪ ದಿವಸ ಹಾಗೇ ಹೋಗಿ ಒಂದು ನಾಲ್ಕು ಊರು ಸುತ್ತಾಡಿ, ನೋಡಿಕೊಂಡು, ಪುಣ್ಯಸ್ಥಳ, ಪುಣ್ಯತೀರ್ಥ ಸಮುದ್ರಸ್ನಾನ ಎಲ್ಲ ಮಾಡಿ ಕೊಂಡು ಬರೋಣ ಅಂತಂದ್ರೆ ...... ಏನೇನೋ ವರಸೆ ತೆಗೀತೀರಲ್ಲಾ ...... ಅದಕ್ಕೆ ಕಲ್ಲಾಕೋಕೆ !? ನಾವು ಹೋಗೋದು ನಿಮಗೆ ಇಷ್ಟ ಇಲ್ದಿದ್ರೆ, ಹೇಳಿ .... 'ನಿನ್ಬಿಟ್ಟಿರಲಾರೆ, ಹೋಗಬೇಡ' ಅಂತ. ನಾಚಿಕೆ ಏನು ... ಗಂಡಸಿಗೆ ! ಅಥವಾ ನಾವು ನಾವೇ .... ಹೆಂಗಸರೇ ಪ್ರಯಾಣ ಮಾಡೋದು ನಿಮಗೆ ಅನುಮಾನವಾದರೆ ಅಥವಾ ಅಸೂಯೆಯಾದರೆ ಹಾಗೇಂತ ಹೇಳಿ ... ಯಾಕೆ ಹೆದರಿಕೆ ? ಗಂಡ್ಸಲ್ವೆ ? !

ಹೆದರಿಕೆಯೂ ಇಲ್ಲ .... ಅನುಮಾನವೂ ಇಲ್ಲ ... ಅನುರಾಗವೂ ಇಲ್ಲ... ! ಈಗ ಏನು ಆತುರ ... ಪ್ರಯಾಣಕ್ಕೆ .... ಅಂತ ... ಅಷ್ಟೆ ... ನೋಡು .... ಮಗಳಿಗೆ ಪರೀಕ್ಷೆ ಮುಗಿದು ಹುಡುಗರಿಗೆ ಸ್ಕೂಲಿಗೆ ರಜ ಬಂದಾಗ, ಅವ ರನ್ನೂ ಕರೆದುಕೊಂಡು ನಾನೂ ನೀನೂ...

ಆಹಾ ಹಾ ಹಾ ಹಾ ಸಾಕು ಸುಮ್ಮನಿರೀಂದ್ರೆ ! ಎಷ್ಟುಸಲ ರಜ ಬರಲಿಲ್ಲ... ಎಷ್ಟುಸಲ ಪರೀಕ್ಷೆ ಆಗಲಿಲ್ಲ ... ಎಷ್ಟುಸಲ 'ನಾನೂ ಬರ್ತೀನೆ' ಅಂತ ಅಂಗಲಾಚಿಕೊಂಡ್ರೂ ಕೂಡ ನೀವು ಮಾತ್ರ ಹೋಗಿ ದೇಶದೇಶ ಸುತ್ತಾಡಿ ಕೊಂಡು ಬರಲಿಲ್ಲ ... ನಮ್ಮನ್ನು ಬಿಟ್ಟು .... ನಿಮ್ಮನ್ನು ನೆಚ್ಚಿಕೊಂಡ್ರೆ ಯಾವ ಕೆಲ್ಸವೂ ಆಗೋದಿಲ್ಲ ;.... ನನಗ್ಗೊತ್ತೂಂದ್ರೇ . . . .

ಓಹೋ.... ...ಸರಿ ಸರಿ, ಗೊತ್ತಾಯ್ತು, ಬಿಡು....... ! ನಾನು ಆಗ ಹಾಗೆ ಮಾಡಿ ದ್ದಕ್ಕೆ ನೀನು ಈಗ ಹೀಗೆ ಮಾಡ್ತಿ........ ! ಮುಯ್ಯಿಗೆ ಮುಯ್ಯಿ !

ಭೇಷ್ ! ನಿನ್ನ ಜಾಣತನ ಏನು ಹೇಳಲಿ !!... ...ಅಲ್ವೇ .... ಇಷ್ಟು ವಯಸ್ಸಾಗಿ ....

ಹೌದ್ಪಾದು .... ಇಷ್ಟು ವಯಸ್ಸಾಗಿರೋವಾಗ್ಲೂ ಒಂದು ಹದಿನೈದು ದಿವಸ ಮನೆಬಿಟ್ಟು ಹೋಗ್ತೀನೆ ಅಂದ್ರೆ ಬಿಟ್ಟಿರಲಾರ್ರಲ್ಲ ನೀವು ! ನಿಮ್ಮ ಜಾಣ್ತನಾನ್ನ ಎಷ್ಟೂಂತ ಹೇಳಲಿ .... ಸುಮ್ನಿರೀಂದ್ರೆ ....! ವಯಸ್ಸಂತೆ .... ವಯಸ್ಸು. ನಿಮಗಿಂತ ಏನು ವಯಸ್ಸಾಗಿದೆ ನನಗೆ ?

ಇದೇನ್ನಂತೀ !! ಮಾತಿಗೆ ಮಾತು .... ಎಂಥಾ ಮಾತು ! ! ... ನಿನ್ನ ಮಾತು ಕೇಳ್ತಾ ಇದ್ರೆ ... ಇನ್ನೂ ಕೇಳ್ತಾ ಇರೋಣ ಅಂತನ್ನಿಸ್ತದೆ ! !

ಸುಮ್ನೆ ಯಾಕೇಂದ್ರೆ ಹೀಗೆಲ್ಲ ಆಡ್ತೀರಿ .... ಆಷಾಢಭೂತಿ ವಿದ್ಯೆ ! ಗಂಡಸರೇ ಹೀಗೆ .... ಮನಸ್ಸಲ್ಲಿರೋದೊಂದು, ಬಾಯಲ್ಲಿ ಹೇಳೋದೊಂದು ! ಅದರಲ್ಲೂ ನೀವಿದ್ದೀರಲ್ಲ .... ಏನ್ಕಲ್ಸಿದೀರಿ ಏನ್ಕಲ್ಸಿದೀರಿ ...!!

ಅದೆಲ್ಲ ಹಾಗಿರಲಿ .... ನಿನ್ನ ಸರ್ಟಿಫಿಕೇಟು ನನಗೆ ಬೇಡ .... ಈಗೇನು ಹೇಳು ... ಈ ಹಾಳು ಪ್ರಯಾಣ ನಿಲ್ಲಿಸೋಕೆ ಆಗೋದಿಲ್ವೇನೆ? ಖಂಡಿತ ಈ ರಜಾದಲ್ಲಿ ನಾವೆಲ್ಲ ಹೋಗೋಣ ....

ರಜಾದಲ್ಲಿ ಮಕ್ಕಳನ್ನು ಕರೆದುಕೊಂಡು ಮದ್ರಾಸಿಗೆ ಹೋಗೋಣ ಅಂದ್ರೆ. ನಂಜಮ್ಮನವರಿಗೆ ಜೊತೆಗೆ ಯಾರೂ ಇಲ್ಲವಂತೆ. ಅದ್ದರಿಂದ ಈಗ ಅವರ ಜೊತೇಲಿ ನಾನು ಹೋಗ್ಬಿಟ್ಟು ಬರ್ತೀನೆ. ನೀವು ನೋಡಿದ್ದೀರಲ್ಲ .... ಈ ಊರುಗಳನ್ನೆಲ್ಲ .... ಈಗ್ಗೆ ಮೂರು ವರ್ಷದಲ್ಲೇ ! ? ನಾನು ಬರೋದಿಲ್ಲ ಅಂದ್ರೆ ಪಾಪ, ನಂಜಮ್ಮನವರೂ ನಿಂತು ಬಿಡಬೇಕಾಗುತ್ತೆ. ಇನ್ನು ಯಾವಾಗ್ಲೋ ಏನೋ ಅವರಿಗೆ ಬಿಡುವಾಗೋದು. ಈಗ ನನಗೆ ಹೆಚ್ಚು ಹಣ ಕೊಡ ಬೇಕಾಗೋದಿಲ್ಲ ಅಂದ್ರೆ ನೀವು. ಒಂದೈವತ್ತು ರೂಪಾಯಿ ಕೊಟ್ಟಿದ್ರೆ ಸಾಕು .... ಹೇಳೋದು ಹದಿನೈದು ದಿವಸ .... ಬೇಗ ಬಂದು ಬಿಡ್ತೀವೆ ....

ಲೇ .... ನೀನು .... ಪೂರಾ .... ಘಾಟೀ ಕಣೇ ! ಏನೋ ಅಂದ್ಕೊಂಡಿದ್ದೆ ! ಏನು ಪ್ಲಾನೂ ! ಏನು ನಯಾ !! ಏನು ಅನುಸರಣೇ........!!! ನಮಗೆಲ್ಲಿ ಬರಬೇಕು .... ಇದೆಲ್ಲ .... ! ಏಟು ಕೊಡೋದು ಮೈಸವರೋದು,........ ಮೈಸವರೋದು ಏಟು ಕೊಡೋದು .... ಹೀಗೇ ಮಾಡೀ ಮಾಡೀ ಹಣ್ಣುಮಾಡ್ತೀರಲ್ಲಾ ಗಂಡಸರನ್ನ ! ?

ಸುಮ್ಮನಿರೀಂದ್ರೆ ... ಸಾಕು. ಇನ್ನು ನಾನೂ ಹೇಳಬೇಕಾಗುತ್ತೆ, ನಿಮ್ಮ ಗಂಡುಜಾತಿ ಜಾಳೀನ. ಹೋಗಲೀಂತ ಸುಮ್ಮನೇ ಇದ್ರೆ ಹಾಗೆ

ನಿಮಗೆ. ಹೆಂಗಸಾದ ಮಾತ್ರಕ್ಕೇ ನಾವು ಎಷ್ಟೊಂತ ನಿಮ್ಮ ಅವಾಂತ್ರ ಸಹಿಸಿಕೊಂಡಿರೋಕಾಗುತ್ತೆ ? .... ನೀಪಿಟ್ಟಗೆರೆ ದಾಟಕೂಡದು ; ನೀವು ಹೇಳಿದ್ದಕ್ಕೆ ಇಲ್ಲ ಅನ್ನಬಾರದು ; . ಹಾಕಿದ್ದು ತಿಂದ್ಕೊಂಡು, ಕೊಟ್ಟದ್ದು ಉಟ್ಕೊಂಡು, ತುಟಿಕ್‌ಪಿಟಿಕ್ ಅನ್ನದೇ ಮೂಲೇಲಿ ಮುದರಿಕೊಂಡಿದ್ರೆ ನಾವು ಬಹಳ ಒಳ್ಳೇವ್ರು ; 'ಗೃಹಿಣಿ', 'ಗೃಹಲಕ್ಷ್ಮಿ', 'ಗರತಿ' 'ಪತಿವ್ರತೆ',.... ಅಂತ ಬೇಕಾದಷ್ಟು ಬಿರುದು ಸ್ವಲ್ಪ ಏನಾದ್ರೂ ನಾವೂ ಒಬ್ಬ ಮನುಷ್ಯರು ಅಂತ ಹಾಗಲ್ಲ ಹೀಗೆ ಅಂತ ಹೇಳಿದರೆ ಬಂತು .... ಜಗಳ, ರಂಪ, 'ಹೊಸಲು ದಾಟಿದರೆ ಹೂತುಬಿಡ್ತೇನೆ', ಅನ್ನೋದು ! ....ಒಂದು ಒರಟು ಬಲ ಕೊಟ್ಟಿದಾನೆ ... ದೇವರು ಈ ಗಂಡು ಜಾತೀಗೆ .... ಕರಡೀ ಹಾಗೆ ! ಸ್ವಭಾವಾನೂ ಹಾಗೇ ಅನ್ನಿ .... ಹೂಂ .... ಏಳಿ. ಹೊತ್ತಾಯ್ತು, ಊಟಕ್ಕೆ. ಮಕ್ಕಳೆಲ್ಲ ಕಾದಿದಾರೆ. ....ನಿಮ್ಮ ನಮ್ಮ ಜಗಳ ಈವತ್ತಿಗೆ ಮುಗಿಯುತ್ತೆಯೇ ?... ಏಳಿ ಬೇಗ....

ಅಲ್ವೇ .... ಲೇ, 'ಗೃಹಲಕ್ಷ್ಮಿ' ! ಸ್ವಲ್ಪ ನಿಲ್ಲೇ .... ಇಲ್ಲಿ ಬಾರೇ ಇಲ್ಲಿ .... ಏನು ಮಾಡಿದ್ದೀಯೇ ಅಡಿಗೆ .... ?

ಏನೋಮಾಡಿದ್ದೇನೆ ...., ಎಲೇ ಮುಂದೆ ಕೂತಾಗ ಗೊತ್ತಾಗುತ್ತೆ !....ಬೇಗ ಏಳೀಂದ್ರೆ .... ಸಂಡಿಗೆ ಹುರಿಯೋಕೆ ಅಂತ ಬಾಣಲೀನ ಒಲೇಮೇಲಿಟ್ಟು ಬಿಟ್ಟು ಬಂದಿದ್ದೆ .... ಹುಪ್ಪ ಸೀದುಹೋಯ್ತೋ ಏನೋ ....

ಸೀದುಹೋದ್ರೆ ಸೀದು ಹೋಗಲೀ .... ಇಲ್ಲಿ ಬಾರೇ ....

ಅಯ್ಯೊ ಇದೇನ್ನಂತೂಂದ್ರೆ !? ಹುಚ್ಚು ! ಬಿಡಿ.......ಕೈಯಿ ....ಜೆನ್ನಾಯ್ತು.... !

ನಾನು .... ಕರಡಿ .... ಕಣೇ .... ಅಯ್ಯೋ ಬಿಡೇ ಕಿವೀನ .... ಎಷ್ಟು ಗಟ್ಟಿಯಾಗಿ ಹಿಂಡ್ತಿ !? ನೋಯುತ್ತೆ ಕಣೆ !....... ನಾಳೆ ತಾನೆ ನೀನು ಹೋಗೋದು....? ಬೆಳಗ್ಗೆ ಬಸ್ಸಿಗೆ....?.... ಐವತ್ತಿಲ್ಲದಿದ್ದರೆ ಒಂದುನೂರು ರೂಪಾಯಿ ನೋಟುಕೊಡ್ತೇನೆ ; ತೆಗೆದುಕೊಂಡು ಹೋಗಿರು .... ಹತ್ತಿರ ಇರ್ಲಿ. ನಿಧಾನವಾಗಿ ಬಾ, ಏನು ಮುಳುಗಿಹೋಗೋದು .... ಆಹಾ ಹಾ .... ಕಿವಿ ಎಷ್ಟು ಗಟ್ಟಿಯಾಗಿ ಹಿಂಡಿದೆಯೇ ? !....... ನೀನುಹೋಗಿ ಬೇಗ .... ಸಂಡಿಗೆ ಹುರಿ ; ನಾನೂ ಬಂದೆ ನಿನ್ನ ಹಿಂದೆಯೇ .... ಅಲ್ವೆ ...., ಏನೇ ನೀನು .... ? ಕಿವಿ ನೋಯೋದಿಲ್ವೇನೇ .... !

ಮತ್ತೆ .... ! ನೀವುಮಾಡಿದ್ದು .... ! ?

ನಾನಂತೂ 'ಕರಡಿ' ಜಾತಿ !....... ನೀನು ?

ನಾನೇ ....? ನಾವು ಕರಡಿ ಕಿವಿ ಹಿಂಡಿ ಕಣ್ಣಲ್ಲಿ ನೀರುಬರ್ಸೋ ಜಾತಿ !....
....' ಹೆಂಗಸರೂ ಹೆಂಗಸರು '.... ಅಂತೀರಲ್ಲ .... ತಿಳೀತೇ ಈಗ .... ?!

ಯಾವಾಗ್ಲೊ ತಿಳೀತು ಕಣೆ ....! ಕವೀ ....! ನೀನು ....ಅ.... ಆ ಜಾತಿ ಅಂತ ....! ಪುನಃ ಹತ್ತಿರಕ್ಕೆ ಬರಬೇಡವೇ ....ನೀನುಹೋಗು ;.... ....ಅಡಿಗೇ ಮನೇಲಿ ಬಾಣಲಿ ಕಾದು ಹೋಗಿರಬೇಕು .... ಬೇಗ........

ಬನ್ನಿ ಬೇಗ .... ನಾಚಿಕೆ ಇಲ್ಲ .... ಗಂಡ್ಜಾತಿಗೆ! ಬರೀ ಭಂಡತನ ....! ಜಂಭಮಾತ್ರ ಎಲ್ಲೂ ಹಿಡೀದು ....

(ನಗ್ತಾ 'ಗೃಹಲಕ್ಷ್ಮಿ' ನಿಷ್ಕ್ರಮಣ ; '' ಗೃಹಸ್ಥ ' ಕಿವಿ ಸವರಿಕೊಳ್ಳುತ್ತಾ ಹಿಂಬಾಲಿಸುವನು.)

—ಬುಳ್ಳ:

ತಾಯ್ನುಡಿ ಎಂದು ಏಕೆ ಹೇಳುತ್ತಾರೆ?

—ತಂದೆಯು ಆ ನುಡಿಯನ್ನು ಸಾಮಾನ್ಯವಾಗಿ ಉಪಯೋಗಿಸುವುದಿಲ್ಲ ಅದಕ್ಕಾಗಿ

ಇಂದಿನ ಪ್ರ. ಪ್ರ ಸಭೆಯ ಸಭಿಕರು ಮುಂದುವರಿದ ಅಧಿವೇಶನದಲ್ಲಿ ತುಟ್ಟಿ ಭತ್ಯವನ್ನು ಹೆಚ್ಚುಮಾಡಬೇಕೆಂದು ಕೇಳುತ್ತಿದ್ದಾರಂತೆ.

—ಮಾತಿಗೆ ಅಷ್ಟಾದರೂ ಬೆಲೆ ಹಚ್ಚಿದರೆ ಸಾಕಲ್ಲವೆ ?

ಆಫ್ರಿಕಾದವರೂ ಭಾರತವನ್ನು ನೋಡಿ ಇಲ್ಲಿನ ಸ್ಥಿತಿಯು ಬಲು ವಿಷಾದಕರ ಅಂದರಂತೆ,

—ಅದಕ್ಕೇ ಅಲ್ಲಿರುವ ಭಾರತೀಯರ ಸ್ಥಿತಿಯೂ ಇಲ್ಲಿನವರಂತೇ ಆಗಲೆಂದು ಪ್ರಯತ್ನಮಾಡುತ್ತಿರುವುದು.

ರೂಮಿನೊಳಗೆ......

ಬೇಗ್ಮುಚ್ಕೊ ರೂಮ್ಬಾಗಿಲ್ನ, ಲೇ ಕಿಟ್ಟೀ! ರಾಮೂ, ಆ ಬೀರೂ ಸಂದೀಲಿರುವ ಕೋಲ್ತೊಗೊಳ್ಳೋ ಬೇಗಾ! ---- ಲೋ ಗುಂಡೂ, ಇಲೀನ ನೋಡ್ಕೊಂಡಿರೋ ಬಾಗಿಲಲ್ಲಿ, ಅಯ್ಯೋ! ಅಲ್ಲೋಡ್ತಾಯಿದೆ ನೋಡ್ರೋ! ---- ಎಲ್ಲಿ! ಎಲ್ಲಿ! ಗುಂಡೂ, --- ಗಟ್ಟಿಯಾಗಿ ಮುಚ್ಕೋ ಬಾಗಿಲ್ನ, ---- ಬಿಡ್ಬೇಡ. ಅಣ್ಣಾ! ಅಲ್ಲಿ ಬರ್ತಾಯಿದೆ ನೋಡು! ಅಯ್ಯಯ್ಯೋ! ----- ಒದರೋ ಬೇಗಾ! --- ಸುಮ್ನಿದೀಯೇನೋ? --- ಬಿತ್ತು, -- ಅಲ್ಲೋಡ್ತಾಯಿದೆ, ನೋಡು! ನೋಡು! ಲೇ! ಡುಮ್ಮಾ! ಬೆಂಚ್ಮೇಲೆ ನಿಂತ್ಕೊಂಡು ಹೊಡಿಯೋ --- ಅಯ್ಯೋ! ಬೆಂಚಿನಿಂದ ಬಿದ್ಬಿಟ್ಟ, -- ಅವನ್ನ ಮೇಲೆತ್ತಿರೋ? --- ಪಾಪ! ಮೂಗ್ನಲ್ಲಿ ರಕ್ತಾ ಬರ್ತಾಯಿದೆಯೋ! ಅಲ್ನೋಡೋ, ಬೀರ್ಸಂದೀಲಿ ಹೋಗ್ತಾಯಿದೆ.

ಬೀರೂನ ಸರಿಸ್ಲೇಣ, — ಹೂಂ! ಇನ್ನೂ! ಇನ್ನೂ ಸ್ವಲ್ಪ! ನಿನ್ಗೇನೊ ಬಂದಿದ್ದು! ನನ್ತಲೇಮೇಲೆ ಪೆಟ್ಟಿಗೆ ಬಿದ್ಬಿಡ್ತು! --- ಅಯ್ಯೋ! ಪಾಪ! ಎಷ್ಟುಗಾತ್ರ ಊದ್ಕೊಂಬಿಟ್ಟದಿಯೋ! --- ನಾಲ್ಕು ಜನಾ ಇದೀರಿ, ಅಷ್ಟು ಚಿಕ್ಕಲೀನ ಹೊಡೆಯಕ್ಕಾಗಲಿಲ್ವೇ? — ಇಲ್ಲಪ್ಪೋ, ನೀನೂ ಸೇರ್ಕೊಂಡು ಐದು ಜನ ಆಗುತ್ತೋ! ರಾಮೂ, ಅವನ್ತಲೇಮೇಲೆ ಎರಡು ಬಿಡೋ ಹೇಳ್ತೀನಿ — ಯಾಕೋ ಲೇ, ಅವನ್ನ ಹೊಡೀತೀಯಾ, — ಇಲೀನ ಬಿಟ್ಟು. ಸುಮ್ನಿರೋ ಬಾಯ್ಮುಚ್ಕೊಂಡು, ---- ನಾನ್ಹೇಳಿದ್ದು ಗೊತ್ತೇ? ನನ್ಮಾತ್ಕೇಳ್ಲೋಯ್ತೋ! ಪೆಟ್ಟಿಗೇನ ಅತ್ಲಾಕಡೆ ಸರ್ಸೊ! --- ಕಣ್ಕಾಣೋಲ್ವೇನೋ, ಡುಮ್ಮಾ.

ಕಿಟ್ಟೀ ಲೇ! ಚುಚ್ಚೇಡಪ್ಪೋ --- ನನ್ತಲೆ ಇರೋದು ಸಂದೀಲಿ ---- ಪೆಟ್ಗೇ ಸಂದೀಗೆ ಓಡೋಯ್ತು, ನೋಡೋ, ---- ನೀವೆಲ್ಲಾ ಅತ್ಲಾಕಡೆ ಹೋಗಿ ನಿಂತ್ಕೊಳ್ರೋ, - ನಾನಿತ್ಲಾಕಡೆ ಜಪ್ಪಾನ ಎಳೀತೀನಿ - ಪೆಟ್ಗೇ ಸಂದಿಯಿಂದ ಬಂದ್ಬಿಡುತ್ತೆ ಇಲಿ. ಅಯ್ಯೋ! ಬಿದ್ದ! --- ಯಾಕೋ ಹಾಗೆಳೆದಿದ್ದು ಧಡಿಯ? — ನಿನ್ಗೇನ್ಬಂದಿದ್ದು?

ಗುಂಡೂ! ಬಾಗಿಲ್ತೆಗೀಬೇಡ್ವೋ? ಅಲ್ನೋಡ್ತು, ನೋಡೋ, ಅಗೊ! ಅಗೊ! -- ಬೇಗ! ಬೇಗ! ಬಡೀರೊ ---- ಅಯ್ಯೋ! ಬಾಗಿಲ್ಸಂದೀಲೋಡ್ಬಿಡ್ತೋ! ---

— ಡಿ. ವಿ. ಕೆ. ಶೆಟ್ಟಿ.

ಆಳುಗಳ ಒಳಸಂಚು

———o———

ಬಸವನ ಗುಡಿಯಲ್ಲಿ ಎರಡು ಬಂಗಲಿಗಳು. ಎದುರು, ಬದುರು. ಶ್ರೀಮಂತ ಜೀವನ—ಸಾಲ ಸೋಲ ಸೊಕ್ಕು ಅಳಿಯ ಕಾರು ಕ್ಲಬ್ಬು ಆಳು, ಪಾಳು ಇತ್ಯಾದಿ.

ಒಂದುದಿನ ಬದುರುಮನೆ ಅಮ್ಮಾವರು ತಮ್ಮ ಜವಾನನ್ನ "ಏನೋ ಇದು? ಎಷ್ಟುಹೊತ್ತಿಗೋ ಚಾಕರಿಗೆ ಬರುವುದು? ಗಂಟೆ ಎಂಟು ಹೊಡೆಯಿತು. ಎದುರ್ರು ಮನೆಯಲ್ಲಿ ನೋಡು. ಜವಾನ ಬಂದು ಆಗಲೇ ಅರ್ಧಗಂಟೆ ಆಯಿತು....'' ಅಂದರು. ಅವತ್ತು ಸಂಜೆ ಆ ಜವಾನರಿಬ್ಬರೂ ಮಾತನಾಡಿ ಪಿತೂರಿ ಹೂಡಿದರು.

ಮರುದಿನ ಎದುರುಮನೆ ಅಮ್ಮನವರು ತಮ್ಮ ಜವಾನನ್ನ, "ಚೆನ್ನಾಯಿತು, ಬೋರ! ಏನಿದು? ನಿನಗೇನು ಜ್ಞಾನಗೀನ ಇಲ್ಲವೋ? ಆಗಲೇ ಎಂಟೂವರೆ! ಇಷ್ಟುಹೊತ್ತು ಏನುಮಾಡುತ್ತಿದ್ದೆ ಬೀದೀಲಿ? ಬದುರುಮನೆ ಜವಾನನಹಾಗೆ ಎಂಟುಗಂಟೆಗೆ ಚಾಕರಿಗೆ ಬರುವುದಕ್ಕೆ ಏನುಕೇಡು ನಿನಗೆ?'' ಅಂದರು.

ಆದರಾಚೆದಿನ ಬದುರುಮನೆ ಅಮ್ಮಾವರು ತಮ್ಮ ಜವಾನ ಕೆಂಚನನ್ನ "ಓಹೊ! ಬರಬರುತ್ತಾ ಯಾಕೊ ಹೀಗಾಯಿತು? ಚಾಕರಿಮೇಲೆ ಆಸೇನೇ ಇಲ್ಲವೇನೋ? ಡಿಸ್ಮಿಸ್ ಮಾಡಿಬಿಟ್ಟೇನು! ಬೋರ, ಪಾಪ, ಆಗಲೇ ಬಂದು ಗಿಡಕ್ಕೆ ನೀರು ಹುಯ್ದು ಹಸು ಕರೆಯುತ್ತಿದಾನೆ. ನೀನು, ಭೂಪ, ಒಂಬತ್ತು ಗಂಟೆಗೆ ಬಂದೆಯಾ! ಅವನ ಜೊತೆ ನೀನು ಬಂದುಬಿಡಬೇಕು, ನಾಳೆಯಿಂದ!'' ಅಂದರು.

ಮರುದಿನ ಎದುರುಮನೆ ಅಮ್ಮಾವರು, "ಬೋರ! ಬೋರ! ಏನಿದು? ಬುದ್ಧಿಗಿದ್ಧಿ ಇದೆಯೋ ಇಲ್ಲವೋ? ಬೇಗ ಬರದೆ ಇದ್ದರೆ, ಓಡಿಸಿಬಿಡುತ್ತೇನೆ ನೋಡು. ನೀವು ಜವಾನರೆಲ್ಲ ಹೆಚ್ಚಿಹೋಗಿದ್ದೀರಿ...ಆ ಮನೆ ಬೋರ ನೋಡು, ಪಾಪ! ಆಗಲೇ ಬಂದುಬಿಟ್ಟಿದ್ದಾನೆ, ಒಂಬತ್ತು ಗಂಟೆಗೆ: ನೀನು ಶುದ್ಧ ಸೋಮಾರಿ! ......ಒಂಬತ್ತೂಮುಕ್ಕಾಲು, ಈಗ ...ಗೊತ್ತಾಯಿತೆ?'' ಅಂದರು.

ಆಚೆದಿನ, ಬದುರುಮನೆ ಅಮ್ಮಾವರು, "ಕೆಂಚ! ಹತ್ತೂವರೆ ಆಯಿತಲ್ಲೋ! ಬೋರ, ನೋಡು, ಹತ್ತುಗಂಟೆಗೇ ಬಂದು, ಅಚ್ಚುಕಟ್ಟಾಗಿ, ಕೆಲಸಗಿಲಸಮಾಡಿಕೊಂಡು.......'' ಇತ್ಯಾದಿ

—ಶ್ರೀಮತಿ ಕೇಸರಿ.

ಸುಖಜೀವನ

ಮಾನವ ಜನ್ಮ ದೊಡ್ಡದು, ಇದ
ಹಾನಿಮಾಡಲು ಬೇಡ, ಹುಚ್ಚಪ್ಪಗಳಿರ ||

೧

ಕಣ್ಣಾಸ್ ಸ್ಪೈಗಾಲ್ ಮಾಯ, ಸಾಸಿವೆ ಇರಲಿಕೆ
ಕಣ್ಣುಮುಚ್ಚಿ ಕುರುಡಾಗುವರೇ ?
ತಣ್ಣಗಾಗುವಮುನ್ನ ಕಾಫಿ ಮಸಾಲೆ ದೋಸೆ
ಉಣ್ಣದೆ ಉಪವಾಸ ಇರುವರೆ, ಬೋಡಿ ?

೨

ಹಾಡಿನ ಭಕತರು ಹಾರ್ಮೋನಿ ಒತ್ತುವಾಗ
ತಾಳುತಾಳೆಂದರೆ ತಾಳುವರೆ ?
ಕಿವುಡು ಬಾರದಮುನ್ನ ರಾಗಸುಧಾರಸ
ಕಿವಿಯಲಿ ತುಂಬಿರಿ, ಹುಳಿಯ ಹಿಂಡದೆ ನೀವು !

೩

ಏನುಕಾರಣ ? ಪರಿಮಳವನು ಮರೆತಿರಿ ?
ಧನಧಾನ್ಯ ಹೊಲಗದ್ದೆ ಕಾಯುವುದೆ .
ಇನ್ನಾದರು ಏಕೋಭಾವದಿ ನಲಿಯಿರೊ
ಚೆನ್ನದಿ ನೀವೆಲ್ಲ ನಗುಮುಖ ತೋರಿರೊ

—ಗಂಗಾಧರ.

ನವೀನ ಗಾದೆಗಳು

(ಪ್ರಯಾಣದ ಅನಾನುಕೂಲಗಳು)

ಪಾಪಿ ಬಸ್ಸಿಗೆ ಹೋದರೆ, ಮೊಣಕಾಲು ಮಡಿಸಲೂ ಜಾಗ ಇಲ್ಲ

ಮೂರ್ತಿ ಸಣ್ಣದಾದರೂ, ಪೂರ್ತಿ ಸೀಟೇ ಬೇಕಂತೆ

ಬಗ್ಗಿದವನಮೇಲೆ ಬೆಡ್ಡಿಂಗಿಟ್ಟರು

ಮುಖಕ್ಕೆ ಜಾಗಸಿಕ್ಕರೂ, ಮೀಸೆಗೆ ಜಾಗವಿಲ್ಲವಂತೆ

ತಮ್ಮಾ! ಏನುತಂದೆಯೋ, ಅಂಪ್ರೈ, ತಗಣೆ ತಂದೆ, ಅಂದ

ಕೂತಿದ್ದ ಜಾಗಕ್ಕೆ ಜಗಳವಾಡಿದರೆ, ನಿಂತಿದ್ದ ಜಾಗಕ್ಕೂ ಪಂಗನಾಮ

ಕುದುರೆಗಾಡಿಯಲ್ಲಿ ಕೂತರೆ ಕಾಲುನೋವು, ಬಸ್ಸಲ್ಲಿ ಕೂತರೆ ಬೆನ್ನು ನೋವು, ರೈಲಲ್ಲಿ ಕೂತರೆ ಮೈಯೆಲ್ಲ ನೋವು

ಎಣ್ಣೆ ಬರುವ ಹೊತ್ತಿಗೆ, ಟೈರೆಲ್ಲ ಬರ್ಸ್ಟ್.

ಮನೆತುಂಬಾ ಮೋಟಾರು, ದಬ್ಬುವರಿಗೇ ಗತಿ ಇಲ್ಲ

ಕುಂತರೇನು, ನಿಂತರೇನು, ಬಂದದ್ದೇ ಲಾಭ

—o—

ರೇಷನ್ ಅಕ್ಕಿಯ ಕೊರಗು

ಸೊಕ್ಕಿನಲಿ ಜೊತೆಯವರ ಊಟದಲಿ
ನಾವು ಸಮ ನಿಮಗೆಂದು ಬರುವುದಕಳವಿಲ್ಲ

ಸಪ್ಲೈ ಡೈರಕ್ಟರು ನೂಕಿದಾಕಡೆ ಬಿದ್ದು
ಕಲ್ಲು ಮಣ್ಣು ಕೂಟದಲಿ ಕವಿದು ಹುದುಗಿರುವವೆಲ್ಲಾ !

ರೊಕ್ಕ ಕೈಯೊಳಗಿದ್ದೂ, ನಗುನಗುತ ಕುಣಿಕುಣಿತ
ಹೊರಹೊಮ್ಮುವಾಹುರುಡು ಮೈಯೊಳಗಿಲ್ಲ

ಮೂಟೆಮೂಟೆಗಳ ಮಾಡಿ ಮಣ್ಣುಮಾಡುತ್ತಿರುವೆವಲ್ಲಾ !
ಕಾಫಿ, ಟೀಗಳೆಲ್ಲ ಸಿಹಿಬಿಟ್ಟು ಕಹಿಯಾಗುತಿರಲು

ನಮ್ಮಮ್ಮ ಅಕ್ಕಿ ರಾಗಿಯೂ, ಅವುಗಳನನುಸರಿಸುತಿಹಳಲ್ಲಾ
ಕಡ್ಡಿಕಡ್ಡಿಯಾಗಿ ಭೋಗಿಯಿವಳೆನಿಸಿ ಮೆರೆದ ನಮ್ಮಮ್ಮ

ಗಜೇಂದ್ರನಾ ಕೈಪಿಡಿದು ಬೂದಿಮುಸುಕಿದ ಕಲ್ಲಾಗಿರುವಳಲ್ಲಾ
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೇ ?

ಹಿರಿಯ ಹಿಂದಣ ಬೆಸರನೀಯು ಬಲ್ಲವೇ ಬೇಗ ?
ಬ್ಲಾಕ್‌ಮಾರ್ಕೆಟ್ಟಿನ ಮೂಟೆಗಳ ಬೀಳಿಸುವೆವೇ ಮುಂದೆ ?

ಭೋಗದಾ ಅಕ್ಕಿಯಾ ತಿಂದು, ಸರ್ವಜನ ತಿನ್ನಿ ನೀವೆಂದು
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೇ ?

— ಎಸ್. ಎನ್. ಆರ್.

ಟೈಂ ಎಷ್ಟು ?

(ಒಂದು ಸಂಭಾಷಣೆ)

ತಿಮ್ಮಣ್ಣಯ್ಯ

ನಮ್ಮ ದೇಶದಲ್ಲಿ ಅನೇಕರಿಗೆ ಟೈಂ ಎಷ್ಟು ಎಂದು ಇತರರನ್ನು ಕೇಳಿ ತಿಳಿದುಕೊಳ್ಳಬೇಕಾದ ಪ್ರಮೇಯ. ಪರಂಗಿಯವರ ಹಾಗೆ ನಾವು ಎಡಗೈ ಗಡಿಯಾರ ಸಹಿತ ಅವತಾರ ಮಾಡುತ್ತಿಲ್ಲ. ಲೋವರ್‌ಸೆಕಂಡರಿ ಪಾಸಾದ ಕೂಡಲೇ ಕೈಗಡಿಯಾರ ಕೊಂಡುಕೊಡುತ್ತೇವೆ ಎಂದು ನಮ್ಮ ತಂದೆತಾಯಂದಿರು ಮಾತುಕೊಟ್ಟರೂ ಅದನ್ನು ಪಡೆಯುವ ಪುಣ್ಯಾತ್ಮರು ಅತಿವಿರಳ. ಕೈಹಿಡಿಯುವವಳ ತಂದೆ ಎದುರು, ಕೈನೀಡಿ ಗಡಿಯಾರ ಸಂಪಾದಿಸೋಣ ಎಂಬ ನಮ್ಮ ಸವಿಗನಸುಗಳೂ ಕೂಡ ತಂದೆಯ "ಬಿಡೋ, ಅಂಥ ಮುಳುಗಿ ಹೋಗುವ ಕೆಲಸ ನಿನಗೇನಿದೆ?" ಎಂಬ ಉದ್ಗಾರದಿಂದ ಸಿಡಿದುಹೋಗಿವೆ. ಐದೇ ಐದು ರೂಪಾಯಿಗೆ ೧೦೮ ಸಾಮಾನುಗಳನ್ನೂ ಬಹುಮಾನವಾಗಿ ಒಂದು ಗಡಿಯಾರವನ್ನೂ ನಮಗೆ ದಾನಮಾಡಲು ಕಾತುರರಾಗಿರುವ ಕಂಪೆನಿಗಳಿಗೆ ಕಳುಹಿಸಲು ನಮ್ಮ ಹತ್ತಿರ ಅಷ್ಟು ಹಣ ಸೇರಿದರೆ ತಾನೆ? ಅಂತು ಇಂತು ನಮ್ಮಲ್ಲನೇಕರು ಗಡಿಯಾರಕ್ಕೆ ಗತಿಕಾಣದೆ........

ನಾನು

ಯಾಕೆ, ಸ್ವಾಮಿ! ರಿಸ್ಟ್‌ವಾಚಿಗೆ ಗತಿ ಇಲ್ಲ ಅಂತ ನನ್ನನ್ನ ಹೀಗೆ ಹೀಯಾಳಿಸುತ್ತೀದೀರಾ ?

ತಿಮ್ಮಣ್ಣಯ್ಯ

ಹಾಗಲ್ಲ! ರೈಲಿಗೆ ಹೊತ್ತು ಮೀರಿಂತೆ, ಶಾಲೆಯ ಗಂಟೆ ಬಡಿಯುತ್ತೆ, ಮಿಲ್ಲಿನ ಶಿಳ್ಳೆ ಊದಿತ್ತೆ, ಆಸ್ಪತ್ರೆ ಬಾಗಿಲು ಮುಚ್ಚಿಬರೆ, ಕ್ಲೋಸ್‌ಸ್ಪೇಟಿ ತೆರೆಯುತ್ತೆ. ಕುಂಟರ ವಾಲಿ ಚಿತ್ರದಲ್ಲಿ ಬಗಲೇ ಎಷ್ಟು ಆಡಿ ಓಡಿದೆ, ಉಪನ್ಯಾಸ ಮುಗಿದು ನಾಟಕ ಪ್ರಾರಂಭವಾಗಿರಬಹುದೆ, ಹರಿಕಥೆಯಲ್ಲಿ ಚಟ್ನಿ ಓಡಾಡುವ ಹೊತ್ತು ಕಳೆಯುತ್ತೆ, ಟಪಾಲುಪೆಟ್ಟಿಗೆ ಖಾಲಿಮಾಡಿದರೆ, ಮುಂತಾದ ಸಮಯ ಪರೀಕ್ಷೆಗಳಿಗೆ. ಗಡಿಯಾರವಿಲ್ಲದೆ ಹೋದರೆ ....

ನಾನು

ಜ್ಯೋತಿಷರತ್ನ, ಚಿತ್ರಕೂಟ, ಮಲಯಾಳಿ ಮಂತ್ರವಾದಿ ಮುಂತಾದವರು ಕವಡೆಹರಡಿ, ಗುಣಾಕಾರ ಮೋಹಾಕಾರ ಮಾಡಿ, ಕಾಲನಿರ್ಣಯಮಾಡೋದಿಲ್ಲವೆ?

ತಿಮ್ಮಣ್ಣಯ್ಯ

ಚೆನ್ನಾಯಿತು! ಅವೆಲ್ಲ ಎಲ್ಲಿಸಾಧ್ಯ ?.... ಸುಲಭಮಾರ್ಗ ಏನು ಅಂದರೆ, ಯಾರಾದರೂ ಬೀದಿಹೋಕರನ್ನ ಕೇಳಬೇಕು, "ಟೈಂ ಎಷ್ಟು, ಸಾರ್" ಎಂದು.

ನಾನು

ಹೌದು ! ಅವರಲ್ಲೂ ಕನಿಕರ ತುಂಬಿದ ವದನಗಳನ್ನೇ ಆರಿಸಿ,ಕೇಳಬೇಕು !

ತಿಮ್ಮಣ್ಣಯ್ಯ

ಆದರೆ, ಇಷ್ಟನ್ನು ಮಾತ್ರ ನೆನಪಿನಲ್ಲಿಡಿ. ನನ್ನನ್ನು ಮಾತ್ರ ಒಬ್ಬರೂ "ಟೈಂ ಎಷ್ಟು ?" ಎಂದು ಕೇಳಕೂಡದು. ನಾನು ಅಂಥ ಘಂಟಾಘೋಷಕನಲ್ಲ ! ನನ್ನದು ಕಲ್ಲೆದೆ....

ನಾನು

ಯಾಕೆ ?.......ಹೀಗೆ ......ತಾವು ......

ತಿಮ್ಮಣ್ಣಯ್ಯ

ಅಂದರೆ, ನಾನು ಮಹಾಪುರುಷ, ಮಾನವದ್ವೇಷಿ, ಮುಂಗೋಪಿ ಮೂಕ, ಮೊಂಡ,—ಎಂದು ತಿಳಿಯಬೇಡಿ. ನನ್ನಲ್ಲೂ ದಯಾ ದಾಕ್ಷಿಣ್ಯ ಉಂಟು. ಉದಾಹರಣೆ ಹೇಳುತ್ತೇನೆ, ಕೇಳಿ ...ಬೀದಿಯಲ್ಲಿ ಯಾರಾದರೂ ನನ್ನೆದುರು ಸಿಕ್ಕಿದಾಗ, ಅವರು ಮೋಹಕರೂಪಿನವರಾಗಿದ್ದರೆ, ಯಥಾ ಪಂಚಭೂತ....ನಾನೂ.... ಆದರೆ, ಅವರು ಕುರೂಪಿಗಳಾಗಿದ್ದರೆ, ನಾನು ಒಂದು ವಿಶೇಷರೀತಿಯ ಸೇವಾಬುದ್ಧಿಯಿಂದ, ಕಪಟಕುತೂಹಲದಿಂದ, ದುರುದುರಿಸಿ, ಅವರು ದಾಟಿ ಹೋದ ಮೇಲೂ ಹಿಂತಿರುಗಿ ನೋಡಿ ಅಂಥ ನಿರ್ಭಾಗ್ಯರ ಆತ್ಮಾಭಿಮಾನವನ್ನು ಉಳಿಸಿ ಅಭಿವೃದ್ಧಿಗೊಳಿಸುತ್ತೇನೆ. ಅರ್ಥವಾಯಿತೆ, ನಾನು ಹೇಳಿದ್ದು !

ನಾನು

ಅರ್ಥವಾಯಿತು ! ಸಹತಾಪ, ಸಹಾನುಭೂತಿ...ತುಳುಕುತ್ತಿದೆ, ತಮ್ಮಲ್ಲಿ !

ತಿಮ್ಮಣ್ಣಯ್ಯ

ಇಂಥ ನನ್ನನ್ನ "ಟೈಂ ಎಷ್ಟು, ಸಾರ್" ಎಂದು ಕೇಳಕೂಡದು ಎಂದು ಯಾಕೆ ನಿರೋಧಿಸುತ್ತೇನೆ, ಅಂದರೆ, ವಿವರಿಸುತ್ತೇನೆ........

ನಾನು

ವಿವರಿಸಬೇಕಾಗಿಲ್ಲ. ಗೊತ್ತಾಯಿತು ! ಕೋಳಿ, ಸಂಜೆಮಲ್ಲಿಗೆ, ನೆರಳು, ಬೆಳಕು, ಮಸಕು, ಬಲ್ಬುಗಳ ಕಣ್ಣಿಂಗು, ಮುಟ್ಟದಿದ್ದರೂ ಮುನಿ, ಉರಿ, ತಂಪು... ಮುಂತಾದವುಗಳಿಂದಲೇ ಟೈಂ ತಿಳಿಯದೆ, ಈ ಜನ ಅವರಿವರ ಗಡಿಯಾರದ ನಾಡಿಯನ್ನ ಏಕೆ ಹಿಡಿಯಬೇಕು, ಅಂತತಾನೆ ?

ತಿಮ್ಮಣ್ಣಯ್ಯ

ಛೆ....ಛೆ....ಅದಕ್ಕಲ್ಲ! ಅವರ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲು ಕೇವಲ ಅಶಕ್ತ, ನಾನು ; ಆದ್ದರಿಂದ........

ನಾನು

ತಮ್ಮಲ್ಲಿ ಒಂದು ಗಡಿಯಾರ ಇದೆಯಲ್ಲಾ ?.......

ತಿಮ್ಮಣ್ಣಯ್ಯ

ಒಂದಲ್ಲ, ನಾಲ್ಕಿವೆ. ಮನೆ ಹಾಲ್‌ನಲ್ಲಿ ಕಣ್ಣು ಕುಕ್ಕುವಷ್ಟು ದೊಡ್ಡದು, ಒಂದು ಸೈಕೊಷ; ಅಡಿಗೆ ಮನೆಯಲ್ಲಿ ನಾಲಿಗೆಯಲ್ಲಿ ನೀರೂರಿಸುತ್ತ ಒಂದು ಬಿಗ್ಬೆನ್ನು; ಬೆಡ್ರೂಮಿನಲ್ಲಿ ಕಿವಿ ಹತ್ತಿರ ಒಂದು ಅಲಾರಂ ಟೈಂ ಪೀಸ್; ಕೈಗಿದೊಂದ ಚಕ್ಕಳದ ಪಟ್ಟಿ........

ನಾನು

ಮತ್ತಿನ್ನೇನು ? ಪರೋಪಕಾರಮಾಡಬಹುದಲ್ಲಾ !

ತಿಮ್ಮಣ್ಣಯ್ಯ

ಅದನ್ನೇ ವಿವರಿಸುತ್ತೇನೆ, ಈಗ! ತಂದು ಮೊಳೆಹೊಡೆದು ಗೋಡೆಗೆ ಒರಗಿಸಿದ ದಿನವೇ ಆ 'ಸೈಕೋಷ' ಕೆಳಗೆ ಬಿತ್ತು. ಈಗ, ಕಿವಿನುಲಿದು, ನಾಲಗೆ ಒಡೆದು, ಜಗ್ಗಿಸಿದ ಹೊಡೆತಕ್ಕೂ ಅದು ಎಚ್ಚರವಾಗುವುದಿಲ್ಲ. ಕೂರ್ಜ್ ಹತ್ತಿ ಕಿವಿ ನುಲಿದು ಕೆಕ್ಕರಿಸಿದರೆ, ಅದೂ ಕೂಡ 'ನಿರ್ವಿಕಲ್ಪಸಮಾಧಿ' ಹೊಂದಿಬಿಡುತ್ತದೆ. ನಮ್ಮ ಮನೆ ನಾಯಿ ಅಕಸ್ಮಾತ್ ಅಡಿಗೆಮನೆಗೆ ನುಗ್ಗಿದಾಗ ಅಮ್ಮ ಎಲ್ಲೋ ಜ್ಞಾನದಲ್ಲಿ ಆ ಬಿಗ್ಬೆನ್ನನ್ನೇ ಎತ್ತಿ ಅದರ ಬೆನ್ನಮೇಲೆ ಎಸೆದುಬಿಟ್ಟರು. ಅದಕ್ಕೆ ತುಂಬ ಅನವಮಾನವಾಗಿ ಅವತ್ತಿನಿಂದ ರೇಗಿ ಕೂತಿದೆ. ಯಾರು ಯಾವ ಒಳ್ಳೆ ಮಾತಾಡಿದರೂ ಅದರ ಬಿಗುಮಾನ ಸಡಿಲವಾಗಲಿಲ್ಲ ......

ನಾನು

ನಾಯಿಯದೆ ?

ತಿಮ್ಮಣ್ಣಯ್ಯ

ಅಲ್ಲ ... ಬಿಗ್ಬೆನ್ನಿನದು ! ಇನ್ನು, ಅಲಾರಂ ಗಡಿಯಾರ ! ಅದರ ಶಕ್ತಿಯೆಲ್ಲ ಉಡುಗಿ ಹೋಗಿ, ಆರ್ಭಟವೆಲ್ಲ ಅರಳುಮರುಳಿಗೆ ಬಂದಿದೆ. ಅದರ 'ಅರ' ಚುವಿಕೆಯಿಂದ ನಮ್ಮ ಕಿವಿಗಳಿಗೆ ಕಚಕುಳಿಕೂಡ ಆಗುತ್ತಿಲ್ಲ. ಈಚೆಗೆ ಸಾಲದ್ದಕ್ಕೆ, ವಾತ ಬೇರೆ. ನಿಂತಕಾಲಲ್ಲೇ ನಡೆಯುವ ಅಭ್ಯಾಸ ತಪ್ಪಿಹೋಗಿದೆ. ಮಲಗಿಸಿದರೆ, ಕೆಳಮುಖವಾಗಿ ಮಲಗಿಸಿದರೆ, ಮಾತ್ರ ಮೈಗೆ ಜೀವತುಂಬಿ, ರಕ್ತಚಲನೆಯಾಗಿ ಕೈಗಳು ಹಿಂದನ್ನೊಂದು ಹಿಂಬಾಲಿಸುತ್ತವೆ. ಎತ್ತಿ ಮುಖಕ್ಕಡ್ಡವಾಗಿ ಹಿಡಿದರೆ, ಟೈಂ ಎಷ್ಟು ಎಂದು ತಿಳಿಯಬಹುದು. ಹಿಡಿದವರ ಅದೃಷ್ಟದಂತೆ ಅದರಲ್ಲಿ ಸಮಯ ಕಾಣಿಸುತ್ತದೆ.

ನಾನು

ನಿಮ್ಮ ಕೈಗಡಿಯಾರ ?

ತಿಮ್ಮಣ್ಣಯ್ಯ

ಇದೇ? ಇದೇನೋ ಸರಿಯಾಗಿ ನಡೆಯುತ್ತಿವೆ..ಆದರೆ, ಎರಡುಮುಳ್ಳೂ ಇಲ್ಲ.

ನಾನು

ಹಾಗಾದರೆ, ಮನೆಯಲ್ಲಿ ಹುಡುಗರು ಮಡುಗರು ಸ್ಕೂಲಿಗೆ ಹೋಗಬೇಕಾದರೆ, ಟೈಂ ಎಷ್ಟು ಅಂತ ಹೇಗೆಪತ್ತೆ ಮಾಡುತ್ತೀರಿ ?

ಅದಕ್ಕೆ ಬೇರೊಂದು ಅನುಕೂಲವಿದೆ. ಮನೆ ಹಿತ್ತಲಲ್ಲಿ ಒಂದು ಸಂಪಿಗೆ ಮರ ಇದೆ. ಅದರ ಬಲಗಡೆ ಕೊಂಬೆಯ ಮೂಲಕ ಕೊಂಚದೂರ ಹೋಗಿ ಹತ್ತಿರದ ಒಂದು ಅಡಿಕೆ ಮರಕ್ಕೆ ಹಾರಿ ಇಪ್ಪತ್ತು ಅಡಿ ಎತ್ತರಕ್ಕೆ ಆ ಮರ ಹತ್ತಿದರೆ, ಮಾರ್ಕೆಟ್ ಚೌಕದ ಭಾರಿ ಗಡಿಯಾರದ ಮುಳ್ಳು ಕಾಣಿಸುತ್ತದೆ........ಬಿಸಿಲು ಬೀಳುತ್ತಿದ್ದರೆ! ಆ ಮನೆಯನ್ನ ನಾವು ಗೊತ್ತುಮಾಡಿಕೊಂಡದ್ದಕ್ಕೆ ಅದೂ ಒಂದು ಕಾರಣ... ....ಮುಜರಾಯಿ! ಮನೆ ಮಾಲೀಕರಿಗೆ ಅದು ತಿಳಿದಾಗ, ಬಾಡಿಗೆ ಬೇರೆ ಎಂಟಾಣೆ ಹೆಚ್ಚಿಸಿದ! ಆದರೂ ಚಿಂತೆ ಇಲ್ಲ, ಮತ್ತೊಬ್ಬರನ್ನ 'ಟೈಂ ಎಷ್ಟು' ಎಂದು ಕೇಳುವುದಿಲ್ಲ, ನಾವು ಸಂಪಿಗೆ ಮರ, ಅಡಿಕೆಮರ, ಇರುವ ತನಕ ಭಯವಿಲ್ಲ.



" ಓಹೋ, ಕೋಲು ಹೊಸದು. ಅದಕ್ಕೇ ದೂರದಿಂದ ನಿಮ್ಮ ಗುರುತೇ ಸಿಗಲಿಲ್ಲ ?,

ಜವಾನರ ಗೋಳು

(ಒಂದು ಪ್ರಗತಿ ಕವನ)

ದೀಪವನೊರಸೋ !
ಚಾಪೆಯ ಹಾಸೋ !
ಮಕ್ಕಳನೆತ್ಕೋ, ಮಾದಾ, ಬೋರಾ,
ಸೌದೆಯ ಕಡಿಯೋ !
ಮೊಸರನು ಕಡೆಯೋ !
ತೊಟ್ಟಿಲ ತೂಗೋ ! ಕಿರುಕರ ತಡೆಯೋ !
ಸಕ್ಕರೆ ತಾರೋ !
ಬೇಗನೆ ಬಾರೋ !
ಮಕ್ಕಳ ಜೊತೆಗೆ ಶಾಲೆಗೆ ಹೋಗೋ !
ನೀರನು ಹುಯ್ಯೋ !
ಹೂಗಳ ಕುಯ್ಯೋ !
ಪಕ್ಕದ ಮನೆಯಿಂದಕ್ಕನ ಕರೆಯೋ !
ನಾಯಿಯ ತೊಳೆಯೋ !
ಸುಣ್ಣವ ಬಳಿಯೋ !
ಅಣ್ಣನ ಬೂಟ್ಸಿಗೆ ಪಾಲೀಷ್ ಹಾಕೊ !
ಕೂಸಿನ ಮೂಗಲಿ
ಸಿಂಬಳ ನೋಡೋ !
ಸಂಬಳ ಖೋತ, ಬೈಗಳ ಸುರಿಮಳೆ !
ಹೆಸರಿಗೆ ಮಾತ್ರ
ಆಫೀಸ್ ಪ್ಯೂನು !
ಮನೆಯ ಗುಲಾಮರು ನಾವುಗಳು !

ದೊರೆಯ ಊರಿನಲ್ಲಿ

ಅಹ್ಮದಾಬಾದ್ ಸ್ಟೇಷನ್ನಲ್ಲಿಳಿಯುತ್ತಲೇ ಎಂದೂ ಆವರಿಸದ ದಿಗ್ಭ್ರಮೆ ಹಿಡೀತು ನಂಗೆ. ಸುತ್ತಮುತ್ತು ಎಲ್ಲಿ ನೋಡಿದರೂ ಖಾದೀಧಾರಿಗಳೇ ಕಣ್ಣಿಗೆ ಕಂಡುಬಂದ್ರು ; ಕಿವಿಯಲ್ಲಿ, “ ಜೈ ಜೈ ” ಶಬ್ದಗಳು ಒಂದೇ ಸಮನೆ ಅರಚಿಕೊಳ್ಳುತ್ತಿದ್ದುವು. ಶಬ್ದವೇನೋ ಸ್ಟೇಷನ್ನಿನ ಹೊರಗಡೆಯಿಂದಲೇ ಬರುತ್ತಿದ್ರೂ ಸ್ಟೇಷನ್ನನ್ನೇ ಉರುಳಿಸುವಷ್ಟು ಘನವಾಗಿತ್ತು—

“ ಇದೇಕಿದೂ ? ”ಂತ ಮುಂದೆ ನೀವು ಕೇಳುವ ಪ್ರಶ್ನೆಗೆ ಮೊದಲೇ ಹೇಳಿಬಿಡ್ತೇನೆ. ನಾನು ಈ ಊರಿಗೆ ಹೊರಟು ಬಂದ ವೇಳೆಯೇ ಅಂಥಹುದು ;— ಆಗಸ್ಟ್ ಮಾಸ ಮುಗಿದು ಸೆಪ್ಟಂಬರ್ ಅರ್ಧಪೂರೈಸುವುದರಲ್ಲಿದ್ದ ಸಾವಿರದ ಒಂಬೈನೂರ ನಲವತ್ತೆರಡನೆಯ ಇಸವಿ, ನನ್ನ ಪ್ರಯಾಣದ ಕಾಲವೆಂದು ಹೇಳಿದರೆ, ಮೇಲೆ ನನಗಾದ ದಿಗ್ಭ್ರಮೆಯೇ ನಿಮಗೂ ಹಿಡಿಯುತ್ತಿತ್ತು ಎಂದು ನಾನು ಬೇರೇ ಹೇಳಬೇಕಿಲ್ಲವಷ್ಟೆ ? ಆಗಲೇ ನನಗೆ ಹೊಸ ಪದಗಳ ಪರಿಚಯವಾದದ್ದು. —Sabotage, ಗೂಂಡಾ, ಚಳುವಳಿ, Sedition, ಮೊದಲಾದ ಇನ್ನೂ ಅನೇಕ ನೂತನ ಶಬ್ದಗಳು ನನ್ನ ಮಂಡೆಗೆ ಹಾರಿ, ಕಲಕಿತ್ತು.

ಬೊಂಬಾಯಿ ಬಿಡುವಾಗಲೇ ನನ್ನ ಸೋದರಮಾವ ಹೇಳಿದ, ‘ ಅಲ್ಲೂ ಗಲಾಟೆ ಏನೂ ಕಡಮೆ ಇಲ್ಲಾ ಕಣೊ. ಮೊನ್ನೆ ಯಾವುದೋ ಬ್ರಿಡ್ಜಿಗೆ ಏಟು ಹಾಕಿದರಂತೆ. ನೀನು ಸ್ವಲ್ಪ ಹುಷಾರಾಗಿ ಹೋಗಿಬಾ. ತಲೇಗ್ಯಾಕೀಟೋಪಿ: ಬೇರೇ ಹ್ಯಾಟಿಲ್ವೇ ? ಅದೂ ಖಾದೀಟೋಪೀ ಯಾಕ್ಹಾಕಿದ್ದೀ ? ನಿನ್ನ ಒಬ್ಬ ‘ ಗೂಂಡಾ ’ ಅಂತ ಭಾವಿಸಿ, ಜೈಲಿಗೆಳೆದರೆ, ಗತಿ ? ಸ್ಟೇಷನ್ನಿಳಿಯುತ್ಲೇ, ಒಂದು ಹ್ಯಾಟ್ ಕೊಂಡ್ಕೊಂಡ್ಹಾಕ್ಕೊ. ಬೇಗ್ಬಂದ್ಬಿಡು ೨-೩ ದಿನದೊಳ್ಗೆ ”. “ ಹೂ ” ಎಂದು ಹೂಂಕರಿಸಿ, ತಲೆಯಮೇಲಿದ್ದ ಟೋಪಿಯನ್ನು, ಅವನಿಂದ ನನ್ನರೈಲು ಕಣ್ಮರೆಯಾಗೋವರ್ಗೆ ಮರೆಸಿಟ್ಟೆ. ಪುನಃ ಧರಿಸಿದೆ. ಏಕೇಂತೀರೋ, ಅದೂ ಕೇಳಿ. “ ಖಾದಿ ಎಂದರೆ ಅಹಿಂಸೆ ; ಅದನ್ನ ಧರ್ಸಿದವ್ನೂ ಅಹಿಂಸಾಮೂರ್ತಿ”ಂತ ಗಾಂಧಿ ಹೇಳ್ತಿದ್ದದ್ದೂ, ಈಗ ಆಗಾಖಾನರ ಅರಮನೇಲಿ ಜಪಿಸ್ತಿರೋದೂಂತ ನಾನು ಚೆನ್ನಾಗಿಯೇ ಕಂಡುಕೊಂಡಿದ್ದರಿಂದ. ಅದೂ ಪೂರ್ಣ ಪೂರ್ಣ ಧರ್ಸಿರುವ, ನನ್ತಲೇಮೇಲೆ, ಒಂದೇ ಒಂದು ಖಾದೀ ಟೋಪಿ ಇದ್ರೆ, ನನ್ನ್ಯಾಕೆ ಹಿಂಸೆ ಮಾಡ್ತಾರೆ ಪೋಲೀಸ್ನೋರೂ ಅನ್ನೋಭಾವನೆಯಿಂದ ?—

ಈಗ ಬರುತ್ತೇನೆ ನನ್ನಕಥೆಯ ಮೊದಲಿಗೆ. ಸ್ಟೇಷನ್ನಿನಲ್ಲಿ ಆ ಗಲಾಟೇನ್ನೋಡಿದ್ದೇ, ಒಂದುಸಲ ನನ್ನ ಉತ್ತಮಾಂಗದ ಕಡೆಗೆ ದೃಷ್ಟಿಯನ್ನೇರಿಸಿದೆ. ಹಾಳು ಶಿರಸ್ಸಿನಮೇಲೆ, ಗೂಬೇ ಕೂತ್ಹಾಗೆ ಕೂತಿತ್ತು ಖಾದೀ ಟೋಪಿ. ಬೆಚ್ಚಿ ಬಿದ್ದು, ಅತ್ತಿತ್ತನೋಡಿ, ಟೋಪಿಯನ್ನು ತೆಗೆದು, ತುರುಕಿಬಿಟ್ಟೆ ನನ್ನ ಚೀಲದೊಳಕ್ಕೆ. ಅದರಮೇಲೆ ಹೇರಿದೆ, ನನ್ನ ಸಿಲ್ಕುಪಲ್ಕು ಷರಟುಗಳನ್ನು. ನನ್ನ ಈ ವರ್ತನೇನ ಯಾವದೋ ಗಿರಿಜಾ ವಿಲಾಸಿಯು ಗಿರೀಶಚಂದ್ರ (ಅವನೇನಾದ್ರೂ ಪತ್ತೇದಾರನೇ ಎನ್ನುವ ಸಂದೇಹಬೇರೆ) ನಿಂತಿದ್ದ, ಯುವಕ ಗಮನಿಸಿಯೇಬಿಟ್ಟ.

'ಎಲ್ಲೀಸ್ ಬ್ರಿಡ್ಜ್' ಗೆ, ಬೆಂಗಳೂರಲ್ಲಿ ಕಲ್ತಿದ್ದ ಜಟ್ಕಾ ಉರ್ದೂ-ಹಿಂದಿಯ ಮಿಶ್ರಭಾಷೆಯ ಸಹಾಯದಿಂದ, ಒಂದು ಗಾಡಿ ಮಾಡಿದೆ. ಆಗ ನಿಜ್ವಾಗಿಯೂ ಬೆಂಗಳೂರಿನ ಜಟ್ಕಾ ವಾಹಕರಿಗೆ ಕೃತಜ್ಞತೆಯನ್ನು ಅರ್ಪಿಸಿದೆ. ನನ್ನ ಗಾಡಿ ಓಡುತ್ತಿದ್ದಹಾಗೆಯೇ, ಅದರ ಹಿಂದೆ ಸ್ಟೇಷನ್ನಿನಲ್ಲಿ ನೋಡಿದ್ದ, 'C.I.D.' ಇರಬಹುದೆಂದು ಅನುಮಾನಿಸಿದ್ದ, ಆಸಾಮಿ ಹಿಂಬಾಲಿಸಿದ, ಅವನಿಗೂ ನನಗೂ ಅರ್ಧ ಶತಕ ಗಜಗಳ ಅಂತರ (ಅಂದರೆ 50 ಗಜ), ಅಷ್ಟೇ, ಅವನು ನನ್ನಕಡೆ ನೋಡದೆಯೇ, ನನ್ನನ್ನು ಗಮನಿಸುತ್ತಿದ್ದ. ನೋಡಿದರೆ 'ನೋಡಿಕೊಳ್ಳಲಿ' ಎಂದು/ನಿಟ್ಟುಸಿರು ಬಿಟ್ಟು, ಸುಮ್ಮನೆ ಹೊರಟೆ. ಆ ಬಡಾವಣೆಯಲ್ಲಿದ್ದ ಒಂದು ದೊಡ್ಡ ಹೊಟೇಲಿನಮುಂದೆ ಗಾಡಿಯನ್ನು ನಿಲ್ಲಿಸುವಂತೆ ಹೇಳಿ, ಒಳಕ್ಕೆ ಹೊರಟೆ. ಅಲ್ಲಿಯೇ ಒಂದು 'ರೂಮು' ಆದಿನದ ಮಟ್ಟಿಗೆ ಬಾಡಿಗೆಗೆ ತೆಗೆದುಕೊಂಡು ನನ್ನ 'ಹೋಲ್ಡಾಲ್' ನ್ನು ತೆಗೆಸಿಕೊಂಡು ರೂಮಿನೊಳಕ್ಕೆ ಹೊರಟೆ.

ಆ ಹೊಟೇಲಿನ ರೂಮಂತೂ ಒಳ್ಳೇ ಬೆಳಕು, ಗಾಳಿಗಳಿಂದ ಕೂಡಿದ್ದು ಅಲ್ಲದೆ, Well furnished ಆಗಿತ್ತು. ಕೊಟ್ಟಿಲ್ಲವೇ ದಿನಕ್ಕೆ ಐದು ರೂಪಾಯಿ ಬಾಡಿಗೆ ? ಬಹಳ ಆಯಾಸವಾಗಿದ್ದರಿಂದ ಅಲ್ಲಿದ್ದ ಕುರ್ಚಿಯಮೇಲೆ ಕುಸಿದು ಕನ್ನಡಿಯೊಳಗೆ ಮುಖ ನೋಡಿಕೊಂಡೆ, ತತ್‌ಕ್ಷಣವೇ ನನ್ನಮನಸ್ಸಿಗೆ ಏನೋ Brain wave ಹೊಳೀತು ಬೆಂಗಳೂರಿನಲ್ಲಿದ್ದಾಗ ನಾನು ಒಮ್ಮೊಮ್ಮೆ ನಮ್ಮ ನಾಟಕ ಸಂಘದಲ್ಲಿ, ನಾಟಕಗಳಲ್ಲಿ ಮುದುಕ, ಗಾಡೀಸಾಬಿ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದುದೂ ಆ ಪಾತ್ರಕ್ಕೆ ಬೇಕಾಗುವ ಉಪಕರಣಗಳು ಯಾವಾಗಲೂ ನನ್ನ ಕೈಪೆಟ್ಟಿಗೆಯಲ್ಲಿಯೇ ಸಿದ್ಧವಾಗಿದ್ದುದೂ ನೆನಪಿಗೆ ಬಂದು, ನನ್ನ ಮನಸ್ಸು ಆನಂದದಿಂದ ಕುಣಿಯತೊಡಗಿತು. ಹಾಗೂ ಹೀಗೆನಿಸಿತು, "ಸ್ಟೇಷನ್ನಿನಿಂದ ನನ್ನನ್ನೇ ಅನುಸರಿಸಿಬಂದ ವ್ಯಕ್ತಿ ಒಂದ್ವೇಳೆ ನಾನು ತಲೇಮೇಲಿದ್ದ ಖಾದೀ (Cap)ನ ಚೀಲ್ದೊಳಗ್ತುರುಕಿದ್ನೋಡಿ ನನ್ನೂ ಗುಮಾನಿ ಮಾಡ್ತಿದ್ದಾನೊ ಏನೋ, ಈ ಊರ್ನಲ್ಲಿ ಈಗ ಹೇಗೆ ತಿರುಗಿದ್ರೂ ತೊಂದ್ರೆ ; ಖಾದಿ ಹಾಕಿದರೆ ಖಂಡಿತ ತೊಂದ್ರೆ ; ಪೂರ್ತಿ ಉಲನ್ನೋ, ಸಿಲ್ಕೋ ಸೂಟ್ಹಾಕ್ಕೊಂಡ್ಹೋದ್ರೆ ಇದ್ದಿದ್ದೂ ಕಷ್ಟ, ಇಪ್ರಿಂದ ಹೇಗಿದ್ರೂ ದಾಡಿಸಾಹೇಬ್ರುವೇಷ ಹಾಕ್ಕೊಳ್ಳೋಕೆ

ಸಿದ್ಧವಾಗಿರೋವಾಗ, ಅದನ್ನೇ ಧರಿಸ್ಕೊಂಡು, 'ದೊರೆ' ಮನೆ ಹುಡುಕ್ಕೊಂಡ್ಹೋಗಿ ಅವನನ್ನೂ ಅವನ್ಮನೆಯೋರ್ನೂ 'ಡಂಗ್' ಮಾಡಿಯೇ ಬಿಡ್ಬೇಕು. ಬೀದೀಲಿ ಸಾನ್ಹೋಗ್ತಿದ್ರೂ, "ಯಾವೋನೋ ಫಕೀರ ಹೋಗ್ತಿದ್ದಾನೆ ಅಂತ ಜನ ಅಂದ್ಕೊಳ್ತಾರೆಯೇ ಹೊರ್ತು ನನ್ನ ವಿಷಯದಲ್ಲಿ ಗುಮಾನಿ ಇರೋಲ್ಲ.

ಹೀಗಂದ್ಕೊಂಡು ನನ್ನ ಫಕೀರಸಾಬಿಯ ವೇಷಕ್ಕೆ Make up ಮಾಡಿಕೊಳ್ಳಲು ಮೊದಲಿಟ್ಟೆ, ಆಗಾಗ್ಗೆ ಯಾರೋ ಅಲ್ಲಿಂದಿಲ್ಲಿಗೆ ಟಲಾಯಿಸ್ತಾ, ಕಿಟಕೀಲಿ ನನ್ನನ್ನೇ ನೋಡಿಕೊಂಡು ಹೋಗ್ತಾ ಇದ್ದರು ಯಾರೋ ಅಕ್ಕಪಕ್ಕದ ರೂಮಿನವರಿರಬಹುದೆಂದು ನಾನು ಗಮನಿಸಲೇ ಇಲ್ಲ, ನನ್ನ ವೇಷ ಮುಗಿಯಿತು, ಹೊಟೇಲಿಂದ ಹೊರಬಿದ್ದೆ.

ಅಲ್ಲಲ್ಲಿ "ಮಹಾರಾಷ್ಟ್ರ ಸೊಸೈಟಿ" ಎಲ್ಲಿರೋದೂಂತ ನನಗ್ತಿಳಿದ, ಅರ್ಧಂಬರ್ಧ ಜಟ್ಕಾ ಉರ್ದುವಿನಲ್ಲಿ ಕೇಳಿಕೊಂಡು ಕಾಲು ಹಾಕಿದೆ. ಕಡೆಗೆ, "ಮಹಾರಾಷ್ಟ್ರ ಸೊಸೈಟಿ" ಎಂಬ ದೊಡ್ಡ ಬೋರ್ಡು ನನ್ನ ಕಣ್ಣಿಗೆ ಬಿತ್ತು. ಆ ದೊಡ್ಡ ಕಾಂಪೌಂಡಿನಲ್ಲಿ ಏಳೆಂಟು ಸಣ್ಣಸಣ್ಣ ಮನೆಗಳೂ ಇದ್ದುವು. ಪ್ರತಿ ಮನೆಯ ಮುಂದೆಯೂ, ಆ ಮನೆಯಲ್ಲಿ ವಾಸಿಸುವವರ ಕುಲ, ಗೋತ್ರಗಳನ್ನು ತಿಳಿಸುವ ಒಂದುಬೋರ್ಡ್ ತಗುಲಿಸಲ್ಪಟ್ಟಿತ್ತು. ಒಂದೊಂದು ಬೋರ್ಡನ್ನೂ ಓದಿಕೊಂಡು ಕೊನೆಯ ಮನೆಯ ಬೋರ್ಡನ್ನು ಪಠಿಸಿದಾಗ ನನಗಾದ ಸಂತೋಷಕ್ಕೆ ಪಾರವೇ ಇಲ್ಲ, ಅದೇ 'ದೊರೆ'ಯ ಮನೆ.

ಮನೆಯ ವರಾಂಡಾದ ಬಾಗಿಲೂ ತೆರೆದಿತ್ತು. ಮನೆಯಲ್ಲಿರುವವರಿಗೆ ನನ್ನ ಆಗಮನದ ವೃತ್ತಾಂತ ತಿಳಿಸಲು ಕೆಮ್ಮಿದೆ. "ಜೈ ಶಂಕರ್ ಅಲ್ಲಾ ಭಗವಾನ್‌ಕಿ ಜೈ" ಎಂದು ಹಿಂದು ಮುಸ್ಲಿಂ ಮೈತ್ರಿಯನ್ನು ತೋರ್ಪಡಿಸಲು ಕೂಗಿದೆ. ಒಳಗಿಂದಲೇ "ಜಾವೆ" ಎಂದು ನಾಲ್ಕಾರು ಕಂಠಗಳು ಕೂಗಿಕೊಂಡವು. ಆ ಕಂಠಗಳಲ್ಲಿ ದೊರೆಯ ಕಂಠವನ್ನು ಗುರ್ತಿಸಿದೆ. "ಸದ್ಯ ಮನೆಯಲ್ಲೇ ಇದ್ದಾನೆ ಆಸಾಮಿ" ಅಂತಂದ್ಕೊಂಡು ಇಂಗ್ಲೀಷಿನಲ್ಲಿ "Fortune teller, correct predictions" ಎಂದು ಕೂಗಿದೆ. ಒಳಗಿನಿಂದ ಒಬ್ಬಾಕೆ ಬಂದು ಗುಜರಾತಿಯಲ್ಲಿ "ನಮಗೇನೂ ಬೇಕಿಲ್ಲ ಹೋಗು" ಎಂದರು. ಮರು ಕ್ಷಣದಲ್ಲಿಯೇ ಮನೆಯ ಯಜಮಾನರೂ ಬಂದು, 'ಅದೇ ನನಗೆ ತಿಳಿಯದ" ಭಾಷೆಯಲ್ಲಿ, "ಹೊರಡಯ್ಯಾ! ನಿನ್ನ ಜ್ಯೋತಿಷ್ಯ ಯಾರಿಗೆಬೇಕು?" ಎಂದು ಗುಡುಗಿದರು. ನಾನು ಇಂಗ್ಲೀಷಿನಲ್ಲಿಯೇ, Please try me. Accurate predictions. Show me your hand please ಎಂದು ಪುನಃ ಕೇಳಿದೆ. ಅಷ್ಟುಹೊತ್ತಿಗೆ ಊಟಮಾಡಿ ಕೈ ತೊಳೆದುಕೊಂಡು ಬಂದ ದೊರೆ. "Get out. We don't want any thing" [ನಮಗೇನೂ ಬೇಕಿಲ್ಲ ಹೊರಡಾಚೆ] ಎಂದು ಅಬ್ಬರಿಸಿದ. ಆದರೆ ನಾನು ಇನ್ನೂ ಗೋಗರಿಯುತ್ತಲೇ ಇದ್ದೆ.

ಅಷ್ಟುಹೊತ್ತಿಗೆ, ಸ್ಟೇಷನ್ನಿನಿಂದ ನನ್ನನ್ನು ಹಿಂಬಾಲಿಸುತ್ತಿದ್ದ ವ್ಯಕ್ತಿ, ನೆಟ್ಟಗೆ ಅಲ್ಲಿಗೇ ಬಂದ. ದೊರೆಯ ಭಾವ (ಮನೆಯ ಯಜಮಾನ) ನವರನ್ನು ಒಳಕ್ಕೆ ಎಳೆದುಕೊಂಡು ಹೋಗಿ, ಏನೇನೋ ಪಿಸಿಪಿಸಿಗುಟ್ಟಿದ. ಅವರ ಪಿಸಿ ಮಾತೆಲ್ಲಾ ಗುಜರಾತಿಯಲ್ಲಿಯೇ ನಡೆದದ್ದರಿಂದ, ನನಗೆ ಪರಿಚಿತವಾಗಿದ್ದ ಶಬ್ದ ವೊಂದುಮಾತ್ರ ನನ್ನನ್ನು ಎಚ್ಚರಿಸಿತು— "ಗೂಂಡಾ" ಎಂಬುದೇ ಆಶಬ್ದ. ಸ್ವಲ್ಪಹೊತ್ತಿನಮೇಲೆ 'ದೊರೆ' ಬಂದು, ನನ್ನಮುಂದೆ ಕೈ ನೀಡಿದ. "ಇದೆಲ್ಲಾ ಆ ಸಿ.ಐ.ಡಿ.ಯ ಮಸಲತ್ತು. "ಸದ್ಯ ಇವನಿಗೂ ನನ್ನ ಸ್ನೇಹಿತರಿಗೂ ಸ್ನೇಹವಿದೆ ಯಲ್ಲಾ. ಇನ್ನೂ ಆಟವಾಡಿಸೋಣಾ"ಂತ ಅಂದ್ಕೊಂಡು, ಅವನ ಭವಿಷ್ಯ, ಭೂತ ಗಳನ್ನು ತಿಳಿಸಲಾರಂಭಿಸಿದೆ. ಸ್ವಲ್ಪ ಸುತ್ತಮುತ್ತ ನೋಡುತ್ತಾ, ಹೆದರಿದವನಂತೆ ನಟಿಸುತ್ತಾ, ತೊದಲುತ್ತಾ, ದೊರೆಯ ವಿಷಯ ಸಂಪೂರ್ಣವಾಗಿಯೇ ಗೊತ್ತಿದ್ದು ದರಿಂದ, ಅವನಿಗೇ ಆಶ್ಚರ್ಯವಾಗುವಹಾಗೆ, ಅವನ ಭೂತವನ್ನು ಅವನಮುಂದೆ ಹಿಡಿದೆ. ಮುಂದೆ ಒಂದೆರಡು ವಿಷಯ ಭವಿಷ್ಯ ನುಡಿದು, "you have a very good future" (ನಿನಗೆ ಒಳ್ಳೇ ಭವಿಷ್ಯವಿದೆ) ಎಂದು ಮುಗಿಸಿದೆ.

ಒಳಗಿನಿಂದ ಸಿ. ಐ. ಡಿ. ಬಂದು, ನನ್ನನ್ನು ಪ್ರಶ್ನಿಮಾಡಲಾರಂಭಿಸಿದ. ಅವನು ಗುಜರಾತಿಯಲ್ಲಿಯೇ ಪ್ರಶ್ನಿಸಲು ಪ್ರಾರಂಭಿಸಿದ್ದನ್ನು ನೋಡಿ, "ನನಗೆ ಆ ಭಾಷೆ ಬರದು. ಇಂಗ್ಲೀಷಿನಲ್ಲಿ ಕೇಳೂ"ಂದೆ. ಅವನ ಪ್ರಶ್ನೆಗೂ ಅಸಂಬದ್ಧ ವಾಗಿ, ಅವನಿಗೆ ಅನುಮಾನ ಬರುವಂತೆ ಉತ್ತರಕೊಟ್ಟೆ, ಪುನಃ ಅವನು ಪ್ರಶ್ನೆಗಳ ಮಳೆಯನ್ನೇ ಕರೆದ. ನಾನು, "ನಾನೊಬ್ಬ ಫಕೀರ; ಗೋಸಾಯಿ; ಸ್ವಲ್ಪ ಸಾಮುದ್ರಿಕ ಗೊತ್ತಿದೆ. ನನ್ನನ್ನೇಕೆ ಹಿಂಸಿಸುತ್ತೀರಿ?" ಎಂದೆ. "ನನಗೆಲ್ಲಾ ಗೊತ್ತು. ನಿನ್ನನ್ನು ಸ್ಟೇಷನ್ನಿನಿಂದಲೂ ಹಿಂಬಾಲಿಸುತ್ತಲೇ ಇದ್ದೇನೆ. ಸ್ಟೇಷನ್ನಿ ನಲ್ಲಿ ಪೂರ್ಣ ಉಲ್ಲನ ಸೂಟ್ ಧರಿಸಿ ರೈಲಿಳಿದ ಆಸಾಮಿ, ಈಗ ಈ ಡ್ರೆಸ್ ಬದಲಾ ಯಿಸಿರೋದನ್ನ ನೋಡಿದರೆ, ನಿನ್ನನ್ನ "ಗೂಂಡಾ"ಂತ ಏಕೆ ಭಾವಿಸಬಾರದು! ಹಾಗೆಯೇ ನಿನ್ನನ್ನು arrest (ದಸ್ತಗಿರಿ) ಮಾಡಬಾರದೇಕೆ?" ಎಂದು ಸಿಡಿಲಿ ನಂತೆ ಅವನು ಘರ್ಜಿಸಿದ, ನಾನು ನಕ್ಕೆ.

ಅವನಿಗೆ ನಾನು ನಕ್ಕಿದ್ದು, ಕೋಪ ಬಂತು. ಸರಿ, ನನ್ನ ಗಡ್ಡಕ್ಕೆ ಕೈ ಹಾಕಿದ ಅದು ಅಷ್ಟು ಸರಿಯಾಗಿ ಅಂಟಿರಲಿಲ್ಲವಾದ್ದರಿಂದ, ಅವನಕೈಗೆ ಸರಾಗ ವಾಗಿ ಕಳಚಿ ಬಂತು. ದೊರೆ, ಮತ್ತು ಅವನ ಭಾವನವರು, ನನ್ನ ಮುಖವನ್ನು ನೋಡಿ ಸ್ವಲ್ಪ ಬೆಚ್ಚಿದವರಂತೆ ತೋರಿದರು. ಆದರೆ, ಯಾವಾಗ ನಾನು ನನ್ನ ತಲೆಗೆ ಸುತ್ತಿದ್ದ ಲಪ್ಪಟ್ಟೆಯನ್ನು ಬಿಚ್ಚಿದೆನೋ, "ಅಯ್ಯೋ! ಪಂಡಿತ್! fool! ಇದೇನೋ ನಿನ್ನ 'ಅಡ್ವೆಂಚರ್'? ಈ situation ನಲ್ಲೇ ಹಾಳ್ನಿನ್ನ ತಮಾಷೆ?" ಎಂದು ಹೇಳುತ್ತಾ ಬಿದ್ದೂ ಬಿದ್ದೂ ನಕ್ಕರು. ನಾನೆಂದೆ, — "ನಿಮ್ಗೆಲ್ಲಾ surprise (ಆಶ್ಚರ್ಯ) ಮಾಡಲು ಹೂಡಿದ ಉಪಾಯ, ದೊರೆ! ಇದೂ ಎಲ್ಲಿ ನಿನ್ನ

fancy dress competition ನಲ್ಲಿ, ಗೆದ್ದ ಮೆಡಲುಗಳ್ನೆಲ್ಲಾ ತಂದು ನನ್ಕಂ ದಿಡು ಹೋದ್ರು".

ಅಷ್ಟುಹೊತ್ತಿಗೆ, ಸಿ. ಐ. ಡಿ. ಸಕ್ಕಬಿಕ್ಕಿಯಾಗಿ, "ಓಹೋ! ಇವರು ನಿಮ್ಮ ಸ್ನೇಹಿತರೋ? ಕ್ಷಮಿಸೀ'ಂತ ಹೊರಟುಬಿಟ್ಟ. ದೊರೆಯ ಮನೆಯವರೆಲ್ಲಾ ನನ್ನ ಅಂದಿನ ವರ್ತನೆಯನ್ನು ಖಂಡಿಸಿ. "ಅಯ್ಯೋ, ಎಲ್ಲಾದ್ರೂ ದಾರೀಲಿ arrest ಮಾಡಿದ್ರೇನ್ಗತೀ? ಈ ಕಾಲ್ದಲ್ಲಿ ತಮಾಷಿಯೇ'ಂತ, ಅಂದು ನನ್ನ ತಮಾಷೆಗೆ ನಕ್ಕರು.

"ಶಂಬಿತ"



"ಅವರೇನು ಅಣ್ಣತಮ್ಮಂದಿರೋ?"
"ಅಲ್ಲ. ಸ್ನೇಹಿತರು"

ಅನರ್ಥ ಕೋಶ

ತಬ್ಬಲಿ : ಉಪಾಧ್ಯಾಯ ವೃತ್ತಿಯನ್ನವಲಂಬಿಸಿದ ನತದೃಷ್ಟ

ತರಾತುರಿ : ಒಂದು ತರಹದ ತುರಿ

ತಾಟಕಿ : ಸ್ತ್ರೀಯರನ್ನೂ ಶಿಕ್ಷಿಸಬಹುದೆಂದು ಶ್ರೀರಾಮ ತೋರಿಸಿದ ಉದಾಹರಣೆ

ತಾರುಣ್ಯ : ಈ ಕಾಲದಲ್ಲಿ ಕೈಗೆ ಬರುವ ಬಿಲ್ಲುಗಳೆಲ್ಲವೂ ಕಾಮನ ಬಿಲ್ಲುಗಳೇ

ತಾಳ : ರಾಗ ಕ್ಷುಧಾರಸ ; ಹಸಿವಿನ ಹೊಡೆತ

ತಾಳಿ : ತಾಳಿ ಅಂತ ಹೇಳಿದರೂ ಅನೇಕ ಹುಡುಗರು ಇದನ್ನ ಕಟ್ಟೇ ಬಿಡುತ್ತಾರೆ

ತಂತಿ : ಮಾವಂದಿರನ್ನು ಹೆದರಿಸಲು ಒದಗುವ ಒಂದು ಸಾಧನ

ತ್ಯಾಗಿ : ಸುಖಪಡಬಾರದು ಎಂಬ ಬೋಧನೆಗೆ ಕಿವಿಗೊಟ್ಟ ದಡ್ಡ

ತಿಮಿಂಗಿಲ : ಸಂಸಾರಸಾಗರದಲ್ಲಿ ಮುಳುಗಿರುವ ಒಂದು ಮಹಾ ಮತ್ಸ್ಯ

ಥರ್ಮಾಮೀಟರ್ : ರೋಗಿಯ ಮಾತು ನಿಲ್ಲಿಸಲು ವೈದ್ಯರು ಅವರ ಬಾಯೊಳಗಿಡುವ ಒಂದು ಯಂತ್ರ

ದತ್ತಯ್ಯ : ದಮ್ಮಯ್ಯನನ್ನು ನೋಡಿ

ದಮ್ಮಯ್ಯ : ದತ್ತಯ್ಯನ ಸಹೋದರ

ದರೋಡೆಕಾರ : ಶ್ರೀಮಂತ ಬಡವ ಎಂಬ ಭೇದವನ್ನೊಪ್ಪದ ವಿಚಾರವಾದಿ, ಕಾರ್ಯಪ್ರೇಮಿ

ದಾಡಿ : ಉತ್ತರ ಕರ್ನಾಟಕದಲ್ಲಿ ಇದಕ್ಕೆ ಹಾನಿ ಎಂದು ಹೆಸರು, ಎಲ್ಲಾದರೂ ಸರಿ, ಇದರಿಂದ ಹಾನಿಯೇ

ದೀರ್ಘಾಯುಸ್ಸು : ಅನೇಕ ವರ್ಷಗಳ ಕಾಲ ಮರಣ ಭಯವನ್ನು ಅನುಭವಿಸು, ಎಂಬ ಶಿಕ್ಷೆ

ದೇಶಾವರ : ದಮ್ಮಯ್ಯ ದತ್ತಯ್ಯರ ಉಪಾಯ ವೈಖರಿ

ದೊಂಬಿ : ಪೋಲೀಸ್ ಇಲಾಖೆಯವರಿಗಾಗಿ ಮಹಾಜನಗಳು ಒದಗಿಸುವ ಒಂದು ಮನೋರಂಜಕ ಕಾರ್ಯಕ್ರಮ

ದೋಸೆ : ಹೋಟೆಲ್‌ಮಾಲೀಕರಿಗೆ ತುಷ್ಟಿಪುಷ್ಟಿಗಳನ್ನು ಕೊಡುವ ಒಂದು ಪದಾರ್ಥ

ದಂಪತಿ : ದಮ್ಮುಹಿಡಿದು ದುಡಿಯುವ ಗಂಡುಜೀವ

—ಖಾಕಾಂತ.

ಆರು ಗಂಟೆಗೆ ಸರಿಯಾಗಿ

ಆವತ್ತು ಸಾಯಂಕಾಲ, ಟೌನ್‌ಹಾಲಿನಲ್ಲಿ ಒಂದು ಚರ್ಚಾಕೂಟ ಏರ್ಪಾಡಾಗಿತ್ತು. ಹೊರ ಊರುಗಳಿಂದ ವಿದ್ಯಾಸಂಸ್ಥೆಗಳ ಪ್ರತಿನಿಧಿಗಳೂ ಬಂದಿದ್ದರು. ಸೊಗಸಾಗಿ ಬಾಯಿಬೀರಿದವರಿಗೆ, ಸುವರ್ಣ ಮುಲಾಮಿನ ರಜತಪಾತ್ರ ಕೊಡುವವರಾಗಿದ್ದರು. ಐದೂವರೆಗೇ ನಾನು ಹಾಸ್ಟಲಿಗೆ ಹೋಗಿ, "ಶೀನೂ" ಅಂದೆ. ಅವನು "ಆಬ್ ಆಯೇ" ಅಂತ ಹಾಡುತ್ತಾ ಕನ್ನಡಿ ಮುಂದೆ ನಿಂತು ಬಾಚಿಕೊಳ್ಳುತ್ತಿದ್ದ. "ಬಾರೋಲೋ ಹೊತ್ತಾಯ್ತು... ಆರು ಗಂಟೆಗೆ ಶುರು" ಅಂದೆ. "ಬಿಡೋ ಬಿಡೋ "ಆರು ಅಂದ್ರೆ ಆರೂವರೆ" ಇಂಡಿಯನ್ ಟೈಮು ನನಗೆ ಗೊತ್ತಿಲ್ವೆ ಅಂದ. ಯಾಕೆ ಹೇಳುವುದಕ್ಕೆ ಬಂದೆ ಅಂದ್ರೆ, ಪುರಾತನ ಸಂಸ್ಕೃತಿಯ ಹಿರಿಮೆಯಲ್ಲಿ ಇಡೀ ಜಗತ್ತಿಗೇ ಆದರ್ಶಪ್ರಾಯವಾಗಿ ಬೆಳಗುತ್ತಿರುವ ಭರತಭೂಮಿ, ಕಾಲದಲ್ಲಿ ಮಾತ್ರ ತನ್ನದೇ ದಾರಿ ಹಿಡಿದಿರುವುದರ ಕಾರಣವೇನು ಎಂಬ ಪ್ರಶ್ನೆ ಅವತ್ತು ತಲೆದೋರಿತು. ಅದೇನು ನಮಗೆ ಹೊಸದಲ್ಲ ಅನ್ನಿ. ಆರು ಅಂದರೆ ಆರೂವರೆ, ಏಳೂ ಅಂದರೆ ಎಂಟು—ಅದು ನಮ್ಮದಾರಿ.

ಒಂದು ದೃಷ್ಟಿಯಿಂದ ನೋಡಿದರೆ, ಅನಾದಿಕಾಲದಿಂದಲೂ, ನಮ್ಮಲ್ಲಿ ಬೆಳೆದು ಬಂದಿರುವ, ಪ್ರಶಾಂತ ಮನಸ್ಸೇ ಅದಕ್ಕೆ ಕಾರಣ. ಯಾವುದರಲ್ಲೂ ಒಂದು ಅವಸರವಿಲ್ಲ, ಗಡಿಬಿಡಿಯಿಲ್ಲ, ಗಲಾಟೆಯಿಲ್ಲ, "ಏನೀವಾಗ" "ನಿಧಾನವಾಗಿ ಆಗಲಿ" "ಅಯ್ಯೋ ಅಯ್ಯೋ ಅದಕ್ಕೇನು" "ಥೆ ಥೆ ಇವತ್ತಲ್ಲದಿದ್ದರೆ ನಾಳೆ ಆಗಲಿ", "ಕೊಳ್ಳೇಹೋಗೋ ಕೆಲಸ ಏನಿದೆ". "ಅಗತ್ಯವಾಗಿ ಆಗಬಹುದು". ಇವು ದಿನಂಪ್ರತಿ ಜೀವನದ, ಸಂಭಾಷಣೆಯ ಸಿಹಿ ಮಾತುಗಳು. "ಏನು ರೈಲಿಗೆ ಹೋಗಬೇಕೇ"—ನಾವು ಹೆದರುವುದು ರೈಲಿಗೆ ಮಾತ್ರ, ಆ ವಾಹನ, ನಮ್ಮ ದೇಶದಲ್ಲಿ ಇಷ್ಟು ವರ್ಷ ಸುಳಿದಾಡುತ್ತಿದ್ದರೂ, ನಮ್ಮ ಬಿರುಗಾಳಿ ಬೀಸಿದ್ದರೂ, ಇನ್ನೂ, ನಮ್ಮ ಹೊತ್ತಿಗೆ ಸರಿಯಾಗಿ, ಅನುಸರಿಸಿ ನಡೆಯುವುದಿಲ್ಲ, ಬೆಳಗ್ಗೆ ಹನ್ನೊಂದು ಗಂಟೆಗೆ, ಯಾರನ್ನಾದರೂ ಬೀದಿಯಲ್ಲಿ ಕಂಡರೂ "ಎದ್ದರಾ" ಎಂಬುದೇ ನಮ್ಮ ಮೊದಲನೆಯ ಮುದ್ದಾದ ಪ್ರಶ್ನೆ.

ಅಂಥಾದ್ದರಲ್ಲಿ, ಕಾರ್ಯದರ್ಶಿ, "ಆರು ಗಂಟೆಗೆ ಸರಿಯಾಗಿ ಸಭೆ ಪ್ರಾರಂಭವಾಗುತ್ತದೆ" ಅಂತ ಪ್ರಕಟಿಸಿ ಬಿಟ್ಟ ಮಾತ್ರಕ್ಕೆ ಯಾರು ಸ್ವಾಮಿ, ಆರು ಗಂಟೆಗೆ ಹೋಗೋರು? ದಿನಚರಿಯ ಹವ್ಯಾಸಗಳನ್ನು ಬಿಟ್ಟು, ನೆಟ್ಟಗೇ ಕಾರ್ಯದರ್ಶಿ ಹೇಳಿದ ಅಂತ ಬರೋದಕ್ಕಾಗುತ್ತದೆಯೇ? ಆದ್ದರಿಂದಲೇ ನಿಧಾಾಾಾನ

ವಾಗಿ, ಆರು ಅಂದರೆ ಏಳಕ್ಕಾದರೂ, ಜನ ಬರೋದು. ಅನೇಕರಿಗೆ ಯಾವಾಗ ಸಭೆ ಏರ್ಪಡಿಸಿದರೂ ಅನಾನುಕೂಲ, ಆರು ಗಂಟೆಗೆ ಅಂದರೆ "ನೀವು ಸಭೆ ಏರ್ಪಡಿಸಿರುವ ಹೊತ್ತು ತುಂಬಾ ಅನಾನುಕೂಲ ಸ್ವಾಮಿ, ರಾತ್ರಿ ಒಂಬತ್ತು ಗಂಟೆಗಾದರೆ ಸಂಧ್ಯಾವಂದನೆ ಮುಗಿಸಿಕೊಂಡು, ಊಟಮಾಡಿಕೊಂಡು ಬರಬಹುದು. ನೀವು ಆರು ಗಂಟೆಗೆ ಪ್ರಾರಂಭಿಸಿದರೆ ಸಂಧ್ಯಾವಂದನೆಮಾಡೋದು ಯಾವಾಗ.... ಮುಖ್ಯ ಕಾಲ" ಎಂದು ಹಿರಿಯರು ಗೊಣಗುತ್ತಾರೆ, ಸರಿ: ಹಾಗೇ ಆಗಲಿ ಅಂತ ಒಂಭತ್ತು ಗಂಟೆಗೆ ಏರ್ಪಾಟು ಮಾಡಿದರೆ "ಒಂಬತ್ತು ಗಂಟೆಗೆ ಯಾರಯ್ಯಾ ಬರ್ತಾರೆ ? ದಿನವೆಲ್ಲಾ ಆಫೀಸು ಕಛೇರೀಲಿ ದುಡಿದೂ ದುಡಿದೂ, ಹಾಯಾಗಿ ಹಾಗೇ ಬಂದು ಊಟಮಾಡಿ, ಮಲಗೋದುಬಿಟ್ಟು, ನಿನ್ನ ಉಪನ್ಯಾಸ ಯಾರಯ್ಯಾ ಕೇಳ್ತಾರೆ" ಅಂತ ಯುವಕರು ಕಾರ್ಯದರ್ಶಿಯನ್ನು ಕೇಳ್ತಾರೆ. ಹೀಗೆ ಒಬ್ಬರ ಟೈಮು ಇನ್ನೊಬ್ಬರಿಗೆ ಸರಿಯಿಲ್ಲ. ಆದಕ್ಕೇ ಕಾರ್ಯದರ್ಶಿ ಪಾಪ, ಸ್ವಲ್ಪ ಕಾದರೆ ಇನ್ನೂ ನಾಕು ಜನ ಹೆಚ್ಚು ಬಂದಾರು ಎಂದು ಉಪನ್ಯಾಸಕರಿಗೆ ಆಸೆ ತೋರಿಸಿ, ಬಾಗಿಲಲ್ಲೇ ಕಾಯುತ್ತಾ ನಿಂತಿರುತ್ತಾನೆ.... ಹಾಗೂ ಹೀಗೂ ಇಂಡಿಯನ್ ಟೈಂ ಆಗೇ ಆಗುತ್ತದೆ.

ಇನ್ನೊಂದು ಮುಖ್ಯಕಾರಣ, ಹೊಸ ವಿಷಯಗಳನ್ನು ತಿಳಿದುಕೊಳ್ಳಲು ನಮ್ಮ ಜನದಲ್ಲಿರುವ ನಿರಾಶೆ; ನಿರುತ್ಸಾಹ. "ಸರಿ.... ರಾಮರಾಯನೋ.... ದೊಡ್ಡ ಪಂಡಿತ, ಮೊನ್ನೆ ಮೊನ್ನೆ ಬೀದೀಲಿ ಹಳೇ ಸೂಟುಹಾಕಿಕೊಂಡು ಓಡಾಡ್ತಾ ಇದ್ದ, ಅವನಾಗಲೇ ಲೆಕ್ಚರ್‌ಕೊಡ್ತಾನಂತೆ.... ಹಯ್ಯೋ.... ಹುಡುಗು ಮುಂಡೇವು" —ಶಾಸ್ತ್ರಿ "ಅಲ್ಲಾ ನಮಗೆ ಗೊತ್ತಿಲ್ಲದಿರೋ ವಿಷಯ ಇವನೇನು ಹೇಳ್ತಾನೆ ಅಂತ ನಾನು ಹೋಗಬೇಕು ಅಂತೀನಿ" ಎಂದು ಹಲವರ ವಾದ. ಸಂಸಾರ ಜೀವಿಗಳು, ತಲೆ ತಗ್ಗಿಸಿಕೊಂಡೇ "ನಾವೆಲ್ಲಿ ಬರೋಣಾಂದ್ರೆ.... ನೂರೆಂಟು ತಾಪತ್ರಯಗಳಲ್ಲ" ಅನ್ನುತ್ತಾರೆ. ಹೆಂಗಸರಂತೂ "ನಮಗ್ಯಾಕೇಂದ್ರೆ ಉಪನ್ಯಾಸ ಗಿಪನ್ಯಾಸ, ಏನೋ ಹರಹರಾ ಅಂತ ಹರಿಪಾದ ಸೇರೋ ಹೆಂಗಸರು, ಹರಿಕಥೇಯೋ ಪುರಾಣವೋ ಆದರೆ ಸ್ವಲ್ಪ ಹತ್ತೀನಾದರೂ ಬಿಡಿಸಬಹುದು" ಎಂದು ಅಡಿಗೆಮನೆ ಸೇರುತ್ತಾರೆ. ಕಾರ್ಯದರ್ಶಿಯೇನೋ ಪಾಪ ದಪ್ಪದಪ್ಪ ಅಕ್ಷರದಲ್ಲೇ "ಹೆಂಗಸರಿಗೆ ಪ್ರತ್ಯೇಕ ಸ್ಥಳಗಳನ್ನು ಏರ್ಪಡಿಸಿರುತ್ತೆ" ಎಂದು ಪ್ರಕಟಿಸಿರುತ್ತಾನೆ. ಸ್ಥಳ ಏರ್ಪಡಿಸಿದಮಾತ್ರಕ್ಕೆ ಬರುವವರು ಯಾರು ? ಅರ್ಧ ಮುಕ್ಕಾಲುಗಂಟೆ ಹೊತ್ತಾಗಿ ಬರುವ ಅಧ್ಯಕ್ಷರ ಅಕೆ, ಉಪನ್ಯಾಸಕರ ಧರ್ಮಪತ್ನಿ, ಕಾರ್ಯದರ್ಶಿ ಮನೆಯ ಹೆಂಗಸರು, ಜನಗಳೆಲ್ಲಾ ತಮ್ಮ ತಮ್ಮ ಕೆಲಸಗಳನ್ನು ಮುಗಿಸಿಕೊಂಡು ಚಿತ್ತೈಸುವವರೆಗೂ ಕಾರ್ಯದರ್ಶಿ ಕಾಯಬೇಕು. ಕಡೆಗೆ ಹತ್ತಿಪ್ಪತ್ತು ಜನರಾದರೂ ಸೇರುವಹೊತ್ತಿಗೆ ಗಂಟೆ ಏಳು, ಏಳೂಕಾಲು, ಏಳೂವರೆ.

ಹೊತ್ತಾಗಿ ಸಭೆ ಸೇರಲು, ಹಲವುಬಾರಿ ಕಾರ್ಯದರ್ಶಿಗಳೂ ಕಾರಣರಾಗುತ್ತಾರೆ. ಬಹು ಮುಖ್ಯವಾದ ಎಷ್ಟೋ ಕೆಲಸಗಳು, ಅಚಾತುರ್ಯಗಳು, ನೆನಪಿಗೆ

ಬರುವುದು, ಸಭೆ ಪ್ರಾರಂಭವಾಗಲು ಹತ್ತು ನಿಮಿಷ ಇದೆ ಅನ್ನುವಾಗ. ಎಷ್ಟೋ ಕಾರ್ಯದರ್ಶಿಗಳಿಗೆ ಕತ್ತಲಾಗುವವರೆಗೂ, ಪೆಟ್ರೊಮಾಕ್ಸ್ ದೀಪದ ನೆನಪೇ ಬರುವುದಿಲ್ಲ. ದೀಪ ತಂದಿದ್ದರೂ "ಸ್ಪಿರಿಟ್" ಇರುವುದಿಲ್ಲ. "ತಾಳಿ ಒಂದೇ ನಿಮಿಷ ಸೈಕಲಲ್ಲಿ ಹೋಗಿ ಬಂದುಬಿಡುತ್ತೇನೆ" ಬರಿಯ ಪರಿದಾಟ, ಅನೇಕಸಲ ಅಧ್ಯಕ್ಷರಿಗೆ ಹಾರ ತರೋದೇ ಮರೆತುಹೋಗಿರುತ್ತೆ. ಕಡೆಗೆ ತಾನೇ ಓಡಬೇಕು. ಕಾರ್ಯಕ್ರಮದಲ್ಲಿ "ಪ್ರಾರ್ಥನೆ" ಅಂತ ಬರೆದಿದ್ದರೂ, ಅದಕ್ಕೆ ಏರ್ಪಾಡು ಮಾಡಿರುವುದಿಲ್ಲ. ಆ ಹೊತ್ತಿಗೆ "ನೀನು ಹೇಳು ನೀನು ಹೇಳು" ಎಂದು ಹೇಳುವುದರಲ್ಲೇ ಹೊತ್ತಾಗುತ್ತೆ. "ಪ್ರಾರ್ಥನೆ" ಮಾಡಲು ಒಪ್ಪಿರುವ ಕೆಲವು ಸ್ತ್ರೀ ಕಂಠಗಳು, ಕಡೆಯ ಗಳಿಗೆಯಲ್ಲಿ ಹಾರ್ಮೋನಿಯಂ ಇಲ್ಲದೆ ಆಗುವುದಿಲ್ಲ ಎಂದು ಸತ್ಯಾಗ್ರಹ ಮಾಡುತ್ತಾರೆ. ಅಂತೂ ಇಂತೂ ಗಂಟೆ ಆರೂಮುಕ್ಕಾಲು; ಇಂಡಿಯನ್ ಟೈಮು.

ಸಭೆ ಹೊತ್ತಾಗಿ ಪ್ರಾರಂಭವಾಗಲು, ಅಧ್ಯಕ್ಷರೂ ಕಾರಣರು, ಕಾರ್ಯದರ್ಶಿಯೋ ಹಲವುಸಲ ಪೀಠಿಕೆಯಾಗಿ ಮೊದಲೇ "ಒಂದು ಅರ್ಧಗಂಟೆ ನಿಧಾನವಾಗಿಯೇ ಬನ್ನಿ ಸಾರ್ ಪರವಾಗಿಲ್ಲ. ಅಲ್ಲಿ ಯಾಕೆ ಬಂದು ಕಾಯೋದು" ಎಂದು ಹೇಳಿರುತ್ತಾನೆ. ಏನೋ, ಅದೃಷ್ಟವಶಾತ್, ಅವತ್ತು ಸಭೆ ಬೇಗಲೇ ತುಂಬಿಹೋಯ್ತು ಅನ್ನೋಣ —ತುಂಬದೆ ಹೋದರೂ ಸುಮಾರುಜನ ಬಂದ್ರು— ಇಲ್ಲಾ, ಡಿ. ಸಿ. ನೇ ಬಂದ್ಬಿಟ್ರು ಆರು ಗಂಟೆಗೆ ಅನ್ನೋಣ— ಅಧ್ಯಕ್ಷರಿಗಾಗಿ ಕಾಯಬೇಕು, ಅವರು ಬಹಳ ಹೊತ್ತಿನವರೆಗೂ ಬರದೇ ಇದ್ದರೆ, ಕಾರ್ಯದರ್ಶಿಯೇ ಹೋಗಿ ಕರೆದುಕೊಂಡು ಬರಬೇಕು! ಅನೇಕಸಾರಿ ಅಧ್ಯಕ್ಷರ ಮೋಟಾರು ದಾರಿಯಲ್ಲೇ ನಿಂತುಹೋಗುತ್ತದೆ. ಅದರ ರಿಪೇರಿ—ಅದು ಸರಿಹೋಗದೆ, ಅಧ್ಯಕ್ಷರು ತಳ್ಳಿಸಿಕೊಂಡು ಸಭಾ ಮಂದಿರಕ್ಕೆ ಬರುವ ಹೊತ್ತಿಗೆ ಗಂಟೆ ಎಂಟು, ನಮ್ಮೂರಿನಲ್ಲಿ ಒಬ್ಬರಿದ್ದರು; ಖಾಯಂ ಅಧ್ಯಕ್ಷರು ಅವರು ತಮ್ಮ ಅಮೋಘವಾದ ಪರಿಚಯ ಭಾಷಣಗಳನ್ನು ಬರೆದುಕೊಂಡು ಬಂದು ಓದುತ್ತಿದ್ದರು. ಆದರೆ ಒಂದುಸಲ, ಸಭೆಗೆ ಬಂದಾಗ ಕನ್ನಡಕವನ್ನು ಮರೆತು ಬಂದಿದ್ದರು. ಅವರ ಮನೆಗೆ ಹೋಗಿ ಕನ್ನಡಕವನ್ನು ತರುವವರೆಗೂ ಸಭೆ ಮೊದಲಾಗಲಿಲ್ಲ.

ಅನೇಕಸಲ, ಸಭೆ ಹೊತ್ತಾಗಿ ಪ್ರಾರಂಭವಾಗಲು, ಕೇವಲ ಒಬ್ಬಿಬ್ಬರು ವ್ಯಕ್ತಿಗಳೇ ಕಾರಣರಾಗುತ್ತಾರೆ. ಸಭೆ ಸೇರಿರಬಹುದು; ಉಪನ್ಯಾಸಕರು, ಅಧ್ಯಕ್ಷರು ಎಲ್ಲರೂ ಸಿದ್ಧವಾಗಿರಬಹುದು. ಆದರೂ, ಈ ಕೆಲವು ವ್ಯಕ್ತಿಗಳು ಬರದೆ, ಸಭೆ ಪ್ರಾರಂಭಿಸಲು, ಕಾರ್ಯದರ್ಶಿಗೆ ಧೈರ್ಯ ಸಾಲದು. ಜರಿ ರುಮಾಲಿನ ಸರ್ಕಾರಿ ಅಧಿಕಾರಿಗಳು ಕೆಲವರು, ಹೀಗೆ ಮಾಡಿ, ಎಲ್ಲರ ಕೋಪಕ್ಕೆ ಪಾತ್ರರಾಗುತ್ತಾರೆ. ಆದರೆ ಅವರಿಗೆ ಅದೊಂದು ಹೆಮ್ಮೆ; ಎಲ್ಲರೂ ನನಗಾಗಿ ಕಾದರಲ್ಲಾ ಅಂತ. ಅದಕ್ಕೇ ಆರು ಅಂದರೆ ಏಳು....ಇಂಡಿಯನ್ ಟೈಮು!

ಮೂರ್ತಿ.



ಹಜಾಮ—“ ಹೇಗೆ ಮಾಡಲಿ ಸಾರ್ ”

“ ಬಾಯಿ ಮುಚ್ಚಿಕೊಂಡು ”

ನಿಮ್ಮನ್ನು ಆಶ್ಚರ್ಯಗೊಳಿಸುವ ಮಹತ್ತರ
ದೃಶ್ಯ ಪ್ರದರ್ಶನ

ಸಾರಥಿಯವರ ದೃಶ್ಯವೆಂದರೆ

ಉತ್ತಮ ದರ್ಜೆಯ ದೃಶ್ಯವೆಂದೆ

"ಮಾಯಾ ಲೋಕಂ"

ಭೂಮಿಕೆ

ಆಂಧ್ರದೇಶದ ಸುಪ್ರಸಿದ್ಧ ನಟೀನಟರ ಸಮೂಹ

ಕನ್ನಾಂಬ, ಸಿ. ಎಸ್. ಆರ್. ಆಂಜನೇಯಲು

ಕಮಲಾ ಕೋಟ್ನಿಸ್, ಜಿ. ವಿ. ಸುಬ್ಬರಾವ್,

ಬೆಜವಾಡ ರಾಜರತ್ನಂ, ಲಂಕಾ ಸತ್ಯಂ,

ಸುಪ್ರಸಿದ್ಧ ಕನ್ನಡ ತಾರೆ ಎ. ವಿ. ರಾಜಮ್ಮ

ಇವರೇ ಮೊದಲಾದವರು ನಟಿಸಿರುವರು

—o—

ಪ್ರೊಡ್ಯೂಸರ್ ಮತ್ತು ಚಿತ್ರ ನಿರ್ದೇಶಕರು :

ಜಿ. ರಾಮಬ್ರಂಹಂ

FOR MYSORE STATE, SOUTH CANARA & COORG :

Vijayalakshmi & Co.

BOOKING THROUGH :

A. V. RAMANAMURTY

247, Gandhi Nagar :: Bangalore City

ಪಾತಿವ್ರತ್ಯದ ಪ್ರಭಾವದ ಮುಂದೆ ತ್ರಿಮೂರ್ತಿಗಳ
ಶಕ್ತಿ ಕೂಡ ವಿಫಲವಾಯಿತು



ಪಾತಿವ್ರತ್ಯದ
ಮಹಾಮಹಿಮೆಯರಿಯಲು

ಸನ್ ರೈಸ್
ಪಿಕ್ಚರ್ಸ್‌ರವರ

ಸತೀ ಅನಸೂಯ

(ದತ್ತಾತ್ರೇಯ ಜನನ)

— ಚಿತ್ರವನ್ನು ತಪ್ಪದೆ ನೋಡಿರಿ —

ತಾರಾಗಣ :— ದುರ್ಗಾಖೋಟೆ - - ಶೋಭನಾಸಮರ್ಥ್,

ಸಾಹುಮೋದಕ್ ಮುಂತಾದವರು

ಬೆಂಗಳೂರು ವಿಜಯಾ ಟಾಕೀಸಿನಲ್ಲಿ ನಿರೀಕ್ಷಿಸಿರಿ.

DISTRIBUTORS FOR :

MYSORE STATE, COORG, SOUTH CANARA, NIZAMS DOMINIONS, ANDHRA AND CEDED DISTRICTS

Mahaveer Pictures Circuit

385, Chickpet :: :: Bangalore City

C.P.S. M.A.2.





ಮಗುವಿಗೆ ಆರೋಗ್ಯ ಕೊಡುವ ಈ ಸಾಬೂನು ಬೇಕು

ಮೈಸೂರು ಸ್ಯಾಂಡಲ್

ಸಾಬೂನಿನಿಂದ ಬರುವ ಹೇರಳವಾದ

ನೊರೆಯು ಚರ್ಮವನ್ನು ಬಹು ಬೇಗ ಚೊಕ್ಕಟಪಡಿಸುತ್ತದೆ....... ರಂಧ್ರಗಳಲ್ಲಿ ಕೊಳೆ ಇಲ್ಲದಂತೆ ಮಾಡುತ್ತೆ. ಚರ್ಮಕ್ಕೆ ಆಹ್ಲಾದಂತಿರುವ ಈ ಆರೋಗ್ಯಕರವಾದ ಸಾಬೂನನ್ನೇ ಯಾವಾಗಲೂ ಉಪಯೋಗಿಸಿ.

ಎಲ್ಲೆಲ್ಲಿಯೂ ದೊರೆಯುತ್ತದೆ

ಮೈಸೂರು ಸ್ಯಾಂಡಲ್ ಸೋಪ್

Printed by B. S. Iyengar, Bangalore City.
Publisher—B. M. Gupta, Editor—M. SHIVARAM.